# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 182 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 21.01.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 182 • PRGI No:KARKAN/2023/88055 • VIJAYANAGARA • 21.01.2025 • Tuesday • Page:04 • Rs:2

Many audiences find print more trustworthy than digital.
Print offers permanence and tangibility that enhance brand credibility and build consumer trust.



1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper
Contact for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ಸಿದ್ಧತೆ ಇಲ್ಲದೆ ಸಭೆಗೆ ಬಂದರೆ ಶಿಸ್ತು ಕ್ರಮ

## ಬದಲಾಗದ ಅಧಿಕಾರಿಗಳ ನಡೆಗೆ ಸಂಸದ ತುಕಾರಾಮ್ ಖಡಕ್ ಎಚ್ಚರಿಕೆ | ದಿಶಾ ಪ್ರಗತಿ ಪರಿಶೀಲನ ಸಭೆ

## ಕೂಡ್ಲಿಗಿಯಲ್ಲಿ ಹುಣಸೆ ಹಣ್ಣಿನ ಸಂಗ್ರಹ ಘಟಕ | ಪ್ರತಿ ಕ್ಷೇತ್ರದ 1 ಗ್ರಾಪಂ ಅಭಿವೃದ್ಧಿಗೆ ಸಿಎಸ್‌ಆರ್ ಅನುದಾನ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹೊಸಪೇಟೆ–ಹಗರಿಬೊಮ್ಮನಹಳ್ಳಿ, ಹರಿಹರ ಮಾರ್ಗವಾಗಿ ಶಿವಮೊಗ್ಗ ಮಾರ್ಗವನ್ನು ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಅನುಮೋದನೆ ಹಂತದಲ್ಲಿದ್ದು ಈ ಭಾಗದ ಸಂಸದರೆಲ್ಲರೂ ಸೇರಿ ಪ್ರಧಾನಮಂತ್ರಿಗಳ ಬಳಿ ನಿಯೋಗ ತೆರಳಿ ಮಂಜೂರಾತಿಗೆ ಕ್ರಮವಹಿಸಲಾಗುತ್ತದೆ ಸಂಸದ ಈ.ತುಕಾರಾಮ್ ಹೇಳಿದರು.

ಸೋಮವಾರ ಹಗರಿಬೊಮ್ಮನಹಳ್ಳಿ ಪಟ್ಟಣದ ತಾಲೂಕು ಆಡಳಿತಸೌಧದ ಸಭಾಂಗಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ನಂತರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಈಗಾಗಲೇ ಮರಿಯಮ್ಮನಹಳ್ಳಿ – ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ರಸ್ತೆ ಆರಂಭಿಸುವಂತೆ ಕೇಂದ್ರ ಸಾರಿಗೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಹಸಿರು ನಿಶಾನೆ ದೊರೆತಿದೆ. ಪ್ರಧಾನಿಮಂತ್ರಿಯವರ ಕಚೇರಿಯಲ್ಲಿ ಅನುಮೋದನೆಯ ಹಂತದಲ್ಲಿದ್ದು, ದಾವಣಗೆರೆ ಸಂಸದರಾದ ಡಾ; ಪ್ರಭಾ ಮಲ್ಲಿಕಾರ್ಜುನ್, ಶಿವಮೊಗ್ಗ ಸಂಸದರಾದ ಬಿ.ವೈ.ರಾಘವೇಂದ್ರ ಜತೆಗೆ ನಿಯೋಗ ತೆರಳಿ ಅನುಷ್ಟಾನಕ್ಕೆ ಮನವಿ ಮಾಡಲಾಗುವುದು ಎಂದರು.

ಹೊಸಪೇಟೆ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಸರ್ವೀಸ್ ರಸ್ತೆ, ಸೈನ್ ಬೋರ್ಡ್ ಸೇರಿದಂತೆ ಸುರಕ್ಷತಾ ಕ್ರಮಗಳಿಗಾಗಿ ಕೇಂದ್ರದಿಂದ ರೂ.54 ಕೋಟಿ ಬಿಡುಗಡೆಯಾಗಿದೆ ಎಂದರು.

ವಿಜಯನಗರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಇಲಾಖೆಗಳ ಸಮನ್ವಯತೆ ಮುಖ್ಯವಾಗಿದೆ. ಪೂರ್ವ ತಯಾರಿ ಇಲ್ಲದೆ ಅಧಿಕಾರಿಗಳು ಸಭೆಗೆ ಬರಬೇಡಿ. ಸಭೆಗೆ ಬರುವ ಮುನ್ನ ಇಲಾಖೆಗಳ ಸಮರ್ಪಕ ಮಾಹಿತಿಯೊಂದಿಗೆ ದತ್ತಾಂಶಗಳ ಸಹಿತ ಹಾಜರಾಗಿ, ಪೂರ್ವ ಸಿದ್ದತೆಯಿಲ್ಲದೇ ಸಭೆಗೆ ಆಗಮಿಸಿದರೇ >>3





## ಮೈಕ್ರೋ ನ್ಯೂಸ್

### ಆರೋಗ್ಯ ಇಲಾಖೆಯಲ್ಲಿನ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿಜಯನಗರ ಜಿಲ್ಲೆಯಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ವೈದ್ಯಾಧಿಕಾರಿಗಳ ಒಟ್ಟು 10 ಹುದ್ದೆಗಳಿದ್ದು, ಎಂಬಿಬಿಎಸ್ ಪೂರ್ಣಗೊಳಿಸಿ ಇಂಟರ್‌ಶಿಪ್ ಮುಗಿಸಿ. ಮೆಡಿಕಲ್ ಕೌನ್ಸಿಲ್‌ನಲ್ಲಿ ನೊಂದಾಯಿತರಾಗಿರಬೇಕು. ಪ್ರಯೋಗಶಾಲಾ ತಂತ್ರಜ್ಞರು ಒಟ್ಟು 10 ಹುದ್ದೆಗಳಿದ್ದು ಪ್ರಯೋಗಶಾಲಾ ತಂತ್ರಜ್ಞತೆಯ ಮೂರು ವರ್ಷದ ಡಿಪ್ಲೋಮಾ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ದ್ವಿತೀಯ ಪಿಯುಸಿನಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣರಾಗಿ ಅರೆ ವೈದ್ಯಕೀಯ ಮಂಡಳಿಯು ನಡೆಸುವ 2 ವರ್ಷಗಳ ತಂತ್ರಜ್ಞರ ತರಬೇತಿ ಪಡೆದಿರಬೇಕು. ಪ್ರಯೋಗಶಾಲಾ ತಂತ್ರಜ್ಞರು ಅರೆವೈದ್ಯಕೀಯ ಮಂಡಳಿಯ ನೋಂದಣಿ ಆಗಿರಬೇಕು.

ಅರ್ಜಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ 60 ಹಾಸಿಗೆಯ ಎಮ್.ಸಿ.ಹೆಚ್ ಆಸ್ಪತ್ರೆ ಹಿಂಭಾಗ ಮಸೀದಿ ಹತ್ತಿರ ಹೊಸಪೇಟೆ ಇಲ್ಲಿ ಜ.20 ರಿಂದ 27 ರವರೆಗೆ ಪಡೆದು ಜ.29 ರೊಳಗೆ ಸಲ್ಲಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜ.23 ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತಯ


**ಹಂಪಿ ಟೈಮ್ಸ್ ಹೊಸಪೇಟೆ**



ಹೊಸಪೇಟೆಯ ನಗರದ 33/11 ಉಪಕೇಂದ್ರದ 11 ಕೆವಿ ವಿದ್ಯುತ್ ಮಾರ್ಗಗಳಲ್ಲಿ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಜ.23 ರಂದು ಬೆ.9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಚಾಪಲಗಟ್ಟ, ಇಂಡಸ್ಟ್ರೀಯಲ್ ಏರಿಯಾ, ಡಾ.ಅಂಬೇಡ್ಕರ್ ವೃತ್ತ, ಇಂದಿರಾ ನಗರ, ಡ್ರೆಸ್ ಕ್ಯಾಂಪ, ರಾಜೀವ್‌ನಗರ, ಪಟೇಲ್ ನಗರ, ಇವಿ ಕ್ಯಾಂಪ್, ವೆಂಕಯಾ ಕ್ಯಾಂಪ್, ಎಂ.ಜಿ.ನಗರ, ಬಸವೇಶ್ವರ ಬಡಾವಣೆ, ಅನ್ನಪೂರ್ಣ ಬಡಾವಣೆ, ಚಿತ್ತವಾಡ್ಗಿ, ಸಾಯಿ ರಾಮ್ ಬಡಾವಣೆ, ಶರಣಬಸವೇಶ್ವರ ಕಾಲೋನಿ, ಕಾಲೇಜ್ ರಸ್ತೆ, ಭಾರತಿ ನಗರ, ತಿರುಮಲ ನಗರ, ಅಮರಾವತಿ ಹಾಗೂ ಹಳೇ ಅಮರಾವತಿ ಹಾಗೂ ಚೆಲುವಾದಿಕೇರಿ, ಹಂಪಿ ರಸ್ತೆ, ರಾಣಿಪೇಟೆ, ಗೊಲ್ಲರಹಟ್ಟಿ, ಬಳ್ಳಾರಿ ರಸ್ತೆ, ಮೂರಂಗಡಿ ವೃತ್ತ, ಗಾಂಧಿ ವೃತ್ತ, ಸಂಕ್ಲಾಪುರ, ನಾಗೇನಹಳ್ಳಿ, ಬಸವನದುರ್ಗ, ಹೊಸೂರ, ನರಸಾಪುರ, ಕಾಲಘಟ್ಟ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ತಿಳಿಸಿದ್ದಾರೆ.

## ಆನಂದ ಬಾಣ




# ಸರಳ ಹೆರಿಗೆಗೆ ವೈದ್ಯರು ಆದ್ಯತೆ ನೀಡಿ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಸೂಚನೆ



**ಹಂಪಿ ಟೈಮ್ಸ್ ಬಳ್ಳಾರಿ**

ಗರ್ಭಿಣಿಯರ ಹೆರಿಗೆಗೆ ಪೂರ್ವ 3 ದಿನಗಳ ಮೊದಲು ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ನಿಗಾವಣೆ ಅಡಿ ಸರಳ ಹೆರಿಗೆಗೆ ಆದ್ಯತೆ ನೀಡಲಾಗಿದ್ದು, ಇದು ವಿನೂತನ ಅಭಿಯಾನಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಜಿಲ್ಲಾ ಆಸ್ಪತ್ರೆಯಲ್ಲಿ ಗಂಡಾಂತರ ಗರ್ಭಿಣಿಯರ ದಾಖಲಾತಿಗಾಗಿ 5 ಹಾಸಿಗೆಗಳನ್ನು ಕಾಯ್ದಿರಿಸಿ ದಾಖಲಾದ ಗರ್ಭಿಣಿಯರಿಗೆ ಆರೋಗ್ಯ ವಿಚಾರಿಸಿ ಮಾತನಾಡಿದರು. ಗರ್ಭಿಣಿಯರಿಗೆ ತನ್ನ ಕುಟುಂಬಕ್ಕೆ ಹೊಸ ಜೀವ ಸೆಲೆ ನೀಡುವ ಹೆರಿಗೆಗೆ ಯಾವುದೇ ಅಪಾಯಗಳು ಇದ್ದರೆ ತಕ್ಷಣವೇ ಗುರ್ತಿಸಿ ನಿರಂತರ ಕಾಳಜಿ ಮೂಲಕ ಎಲ್ಲಾ ಅಗತ್ಯ ಪರೀಕ್ಷೆ ಕೈಗೊಂಡು ಆರೈಕೆ ಮಾಡಿ, ಸರಳ ಹೆರಿಗೆಗೆ ಆದ್ಯತೆ ನೀಡಿ ಜೊತೆಗೆ ಉಚಿತ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಗಂಡಾಂತರ ಗರ್ಭಿಣಿಯರ ಹೆರಿಗೆಯು ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹಣ ಪಾವತಿಸಿ ಕುಟುಂಬಗಳು ಆರ್ಥಿಕವಾಗಿ ತೊಂದರೆಗೀಡಾಗುವ ಪ್ರಕರಣಗಳನ್ನು ತೊಡೆದು ಹಾಕಲು ಜಿಲ್ಲಾಡಳಿತದ ಬೆಂಬಲದಡಿ ಈ ಸೌಲಭ್ಯ ಜಿಲ್ಲೆಯ ಸಾರ್ವಜನಿಕರಿಗೆ ಕಡುಬಡವರಿಗೆ ಆಶಾದೀಪವಾಗಿದೆ ಎಂದರು.

ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್, ಮುಂತಾದ ಕಾರಣಗಳಿದ್ದರೆ ಆಯಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಿ ನಿಗಾವಹಿಸುವ ಮೂಲಕ ಹೆರಿಗೆ ಅವಧಿಯಲ್ಲಿ ಕಂಡು ಬರಬಹುದಾದ ಸಂಭವನಿಯ ತೊಂದರೆಗಳನ್ನು ವೈದ್ಯರ ನಿಗಾವಣೆ ಮೂಲಕ ಗುರ್ತಿಸಿ ಸುರಕ್ಷಿತ ಹೆರಿಗೆ ಕೈಗೊಳ್ಳಲು ಸಾಧ್ಯವಾಗಲಿದೆ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಮಾತನಾಡಿ ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಕ್ಷೇತ್ರ ಮಟ್ಟದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಾದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೇ ಕಳುಹಿಸಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸುವುದು. ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಅಲ್ಲದೇ ಗಾಳಿ ಸುದ್ದಿ ಮೂಲಕ ಕಬ್ಬಿಣಾಂಶ ಮಾತ್ರೆ ನುಂಗಿದರೆ, ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆ ನಂಬಬಾರದು ಎಂದರು.

ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಟ 180 ಒಂದು ವೇಳೆ ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಯಲ್ಲಿ ಸೇವಿಸಬೇಕು. ಇದರ ಜೊತೆ ದೈಹಿಕವಾಗಿ ಸದೃಡವಾಗಿರಲು ಕ್ಯಾಲ್ಸಿಯಮ್ ಮಾತ್ರೆಗಳನ್ನು ಸಹ ನುಂಗಬೇಕು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಡಿ.ಎಮ್.ಓ ಹಾಗೂ ಬಳ್ಳಾರಿ ತಾಲ್ಲೂಕ ಆರೋಗ್ಯ ಅಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಷ್ಟರೋಗ ನಿಯಂತ್ರಣ ಅಧಿಕಾರಿ ಡಾ.ವೀರೇಂದ್ರ ಕುಮಾರ್, ಪ್ರಸೂತಿ ತಜ್ಞರಾದ ಡಾ.ಜಯಪ್ರದ, ಡಾ.ಅಶ್ರಫ್ ಡಾ. ಶ್ರೀ ಲಕ್ಷ್ಮಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶುಶ್ರೂಷಣಾ ಮೇಲ್ವಿಚಾರಕಿ ವಿಮಲಾಕ್ಷಿ, ಶುಶ್ರೂಷಣಾಧಿಕಾರಿ ಮಾಲತಿ ಉಡುಪಿ ಸೇರಿದಂತೆ ಸಿಬ್ಬಂದಿಯವರು, ತಾಯಂದಿರು ಹಾಜರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ



ಜನನ: 01-01-1987
ನಿಧನ 20-01-2025

ಕೆ.ಕೊಟ್ರೇಶ ದಶಮಾಪುರ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಯುವ ಮುಖಂಡ, ನಮ್ಮೆಲ್ಲರ ಪ್ರೀತಿಯ ಕೆ.ಕೊಟ್ರೇಶ(38) ಇವರು ದಿನಾಂಕ 20-01-2025 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆ ದಿನಾಂಕ 21-01-2025ರಂದು ಮಂಗಳವಾರ ಬೆಳಿಗ್ಗೆ 10.30ಕ್ಕೆ ಹಗರಿಬೊಮ್ಮನಹಳ್ಳಿ ತಾಲೂಕಿನ ದಶಮಾಪುರ ಸ್ವಗ್ರಾಮದಲ್ಲಿ ಜರುಗಲಿದೆ.

ದುಃಖತಪ್ತರು

ಸಹೋದರರು, ಸಹೋದರಿಯರು, ದೊಡ್ಡಮ್ಮಂದಿರು, ಬಂಧು-ಮಿತ್ರರು

## ಸಂವಿಧಾನದವನ್ನು ನಾವು ರಕ್ಷಿಸಿದರೆ ಸಂವಿಧಾನ ಭಾರತೀಯರನ್ನು ರಕ್ಷಿಸುತ್ತದೆ : ಸಿಎಂ ಸಿದ್ದರಾಮಯ್ಯ



■ ಹಂಪಿ ಟೈಮ್ಸ್ ಬೆಳಗಾವಿ

ಜನರಲ್ಲಿ ಮಹಾತ್ಮಾ ಗಾಂಧೀಜಿ,ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರಸ್ತುತತೆ ಬಗ್ಗೆ ಅರಿವು ಮೂಡಬೇಕು. ಸಂವಿಧಾನ ರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿ ಎನ್ನುವುದು ತಿಳಿಯಬೇಕು. ಸಂವಿಧಾನದವನ್ನು ನಾವು ರಕ್ಷಿಸಿದರೆ, ಸಂವಿಧಾನ ಭಾರತೀಯರನ್ನು ರಕ್ಷಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಬೆಳಗಾವಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. 1924 ರ ಇಸವಿಯಲ್ಲಿ ಬೆಳಗಾವಿಯಲ್ಲಿ ಡಿಸೆಂಬರ್ ನಲ್ಲಿ ಕಾಂಗ್ರೆಸ್ ಅಧಿವೇಶನ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದಿತ್ತು.

**ಸಮಾವೇಶ ಯಶಸ್ವಿಯಾಗಲಿದೆ :** ಗಾಂಧೀಜಿಯವರು ಡಿಸೆಂಬರ್ 26, 1924 ರಲ್ಲಿ ಕಾಂಗ್ರೆಸ್ ಬೆಳಗಾವಿಯಲ್ಲಿಯೇ ಕಾಂಗ್ರೆಸ್ ಅಧ್ಯಕ್ಷರಾದರು. ಅಧಿವೇಶ ನಡೆದು ಒಂದು ಶತಮಾನವಾಗಿರುವ ಹಿನ್ನೆಲೆಯಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಎಲ್ಲಾ ಸಿದ್ಧತೆಗಳು ನಡೆದಿದ್ದು, ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರೊಂದಿಗೆ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಕಳೆದ ನಾಲ್ಕೈದು ದಿನಗಳಿಂದ ಇಲ್ಲೇ ಇದ್ದು ಅಚ್ಚುಕಟ್ಟಾಗಿ ಸಿದ್ಧತೆಗಳನ್ನು ಕೈಗೊಂಡಿದ್ದಾರೆ. ನಾಳೆಯೂ ಸಮಾವೇಶ ಯಶಸ್ವಿಯಾಗಿ ನಡೆಯಲಿದೆ ಎಂದು ಭರವಸೆ ವ್ಯಕ್ತಪಡಿಸಿದರು. ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಜನ ಇಲ್ಲಿ ಸೇರಲಿದ್ದಾರೆ. ಬೆಳಗಾವಿಯಲ್ಲಿ ಇದು ಐತಿಹಾಸಿಕ ಸಮಾವೇಶವಾಗಲಿದೆ ಎಂದರು.

**ಶತಮಾನೋತ್ಸವದ ಸ್ಮರಣಾರ್ಥ ಸಮಾವೇಶ:** ಬೆಳಗಾವಿಗೆ ಕೊಡುಗೆ ಘೋಷಣೆ ಮಾಡುವ ಸಮಾವೇಶ ಅಲ್ಲ ಎಂದು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಇದು ನೂರು ವರ್ಷಗಳ ಹಿಂದೆ ನಡೆದಿದ್ದ ಅಧಿವೇಶನದ ಜ್ಞಾಪಕಾರ್ಥವಾಗಿ ನಡೆಯುತ್ತಿರುವ ಕಾರ್ಯಕ್ರಮ ಎಂದರು.

ಬೆಳಗಾವಿಯಲ್ಲಿ ನಾಳೆ ಒಂದು ಗಂಟೆಗೆ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ನಡೆಯಲಿದ್ದು, ಈ ಸಮಾವೇಶ ಕಳೆದ ಡಿಸೆಂಬರ್ 27 ರಂದು ನಡೆಯಬೇಕಿತ್ತು. ಮಾಜಿ ಪ್ರಧಾನಿ ಮನ್ ಮೋಹನ್ ಸಿಂಗ್ ಅವರು ನಿಧನರಾದ ಹಿನ್ನೆಲೆಯಲ್ಲಿ ಕಾರ್ಯಕ್ರಮ ಮುಂದೂಡಲ್ಪಟ್ಟಿತ್ತು ಎಂದು ವಿವರಿಸಿದರು.

**ಪ್ರಹ್ಲಾದ್ ಜೋಶಿಗೆ ಇತಿಹಾಸದ ಬಗ್ಗೆ ತಿಳಿದಿಲ್ಲ :** ಕಾಂಗ್ರೆಸ್ ನವರು ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದು, ಅಧಿವೇಶನ ನಡೆಸಲು ಹಕ್ಕಿಲ್ಲ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿಎಂ, ಪ್ರಹ್ಲಾದ್ ಜೋಶಿ ಅವರಿಗೆ ಇತಿಹಾಸ ಗೊತ್ತಿಲ್ಲ. ಗೋಲ್ವಾಲ್ಕರ್, ಹಾಗೂ ಸಾವರ್ಕರ್ ಸಂವಿಧಾನ ಜಾರಿಯಾದಾಗ ಏನು ಮಾತನಾಡಿದ್ದರು ಎಂದು ತಿಳಿದಿದೆಯೇ ಅವರಿಗೆ ಎಂದು ಪ್ರಶ್ನಿಸಿದರು.

**ಪಕ್ಷದ ವತಿಯಿಂದ ಸಮಾವೇಶ:** ಸಮಾವೇಶವನ್ನು ಪಕ್ಷದ ವತಿಯಿಂದ ಕೈಗೊಂಡಿದ್ದು, ಪ್ರತಿಮೆ ಅನಾವರಣವನ್ನು ಸರ್ಕಾರ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಗಳು ಸ್ಪಷ್ಟಪಡಿಸಿದರು.

**ಯತ್ನಾಳ್ ಇತಿಹಾಸ ಓದಿಕೊಂಡಿಲ್ಲ:** ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಗೋಡ್ಸೆ ಹತ್ಯೆಯಲ್ಲಿ ನೆಹರೂ ಅವರ ಪಾತ್ರವಿದೆ ಎಂದಿರುವ ಬಗ್ಗೆ ಮಾತನಾಡಿ ಅವರಿಗೆ ಇತಿಹಾಸ ತಿಳಿದಿಲ್ಲ ಹಾಗೂ ಅದನ್ನು ಓದಿಯೂ ಇಲ್ಲ ಎಂದರು. ಅದಕ್ಕಾಗಿಯೇ ಅಂಬೇಡ್ಕರ್ ಅವರು ಇತಿಹಾಸ ಗೊತ್ತಿಲ್ಲದವರು ಭವಿಷ್ಯವನ್ನು ಸೃಷ್ಟಿಸಲಾರರು ಎಂದು ಹೇಳಿದ್ದರು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಮಹಾತ್ಮಾ ಗಾಂಧಿ ಅವರನ್ನು ಗೋಡ್ಸೆ ಕೊಂದಿದ್ದು, ಆತನ ಜೊತೆ ಸಾವರ್ಕರ್ ಕೂಡ ಶಾಮೀಲಾಗಿರುವ ಬಗ್ಗೆ ಪ್ರಕರಣವಿತ್ತು ಎಂದು ಮುಖ್ಯಮಂತ್ರಿಗಳು ತಿಳಿಸಿದರು .

# ಸಾಧನೆಗೆ ಅಡ್ಡಿಯಾಗದ ಮಾನಸಿಕ ದುರ್ಬಲ ಗ್ರಹಣದ ಕತ್ತಲಲ್ಲಿ ಹುಟ್ಟಿ ಬೆಳಕು ಹರಿಸಿದ ದೀಪ್ತಿ

ಸೂರ್ಯ ಗ್ರಹಣದ ಸಮಯದಲ್ಲಿ ಜನಿಸಿದ ಮಗು ತುಂಬಾ ಚಿಕ್ಕದಾಗಿ ಮತ್ತು ತುಟಿಗಳು ಮೂಗು ಅಸಾಮಾನ್ಯವಾಗಿತ್ತು ಅಂದರೆ ನೋಡುವುದಕ್ಕೆ ವಾನರನ ಹೋಲುತ್ತಿತ್ತು ಇದನ್ನು ನೋಡಿದ ಕುಟುಂಬಸ್ಥರು, ಹಳ್ಳಿಯ ಜನರು ಈ ಮಗುವನ್ನು ಕೋತಿ ಮತ್ತು ಮಾನಸಿಕ ಅಸ್ವಸ್ಥೆ ಎಂದು ಅಪಹಾಸ್ಯ ಮಾಡಿ ಅನಾಥಾಶ್ರಮಕ್ಕೆ ಸೇರಿಸಲು ತಿಳಿಸುತ್ತಿದ್ದರು.

ಅದೇ ಸ್ಥಿತಿಯ ಮಗು ಮುಂದೊಂದು ದಿನ ಭಾರತ ದೇಶದ ಕೀರ್ತಿ ಪತಾಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾರುವಂತೆ ಮಾಡಿದ್ದು ಸಾಧನೆ ಎಂದು ತಾಯಿ ಪತ್ರಿಕೆ ಹೇಳಿಕೆ ಕೊಡುವ ಮಟ್ಟಿಗೆ ಬೆಳೆದು ನಿಲ್ಲುತ್ತಾಳೆ ಎಂದರೆ ಆಶ್ಚರ್ಯವೇ ಸರಿ!.. ಭಗವಂತನ ಕೃಪೆ ಅಲ್ಲದೆ ಮತ್ತೇನು?

100 ರಿಂದ 150 ರೂಪಾಯಿಗಳ ಕೂಲಿಯನ್ನು ತಂದು ತನ್ನ ಕುಟುಂಬವನ್ನು ನಿರ್ವಹಿಸುತ್ತಿದ್ದ ಪತಿ ತೀರಿಕೊಂಡಾಗ ಹೇಳಿಕೊಳ್ಳಲಾಗದ ಸಂಕಷ್ಟ, ಕಿರಿಯ ಮಗಳು ಅಮೂಲ್ಯ ಜೊತೆಗೂಡಿ ಕೂಲಿ ಮಾಡಿ ಕುಟುಂಬ ನಿರ್ವಹಿಸಬೇಕಾದ ಪರಿಸ್ಥಿತಿ ಅಲ್ಪಸ್ವಲ್ಪ ಇದ್ದ ಕೃಷಿ ಭೂಮಿಯನ್ನು ಮಾರಿ ಮಕ್ಕಳನ್ನು ಸಾಕ ಬೇಕಾಯಿತು. ದೀಪ್ತಿ ಮಿತ ಭಾಷಿ ಹಾಗೂ ಸರಳ ಸಂಪನೆ ಹಳ್ಳಿಗರು ಅವಳನ್ನು ಚುಡಾಯಿಸಿದಾಗ ಮನೆ ಯಲ್ಲಿ ಬಂದು ಅಳುತ್ತಿ ದ್ದಳು ಸಿಹಿ ಅನ್ನವನ್ನು ಮಾಡಿಕೊಟ್ಟು ಅವಳನ್ನು ಸಮಾಧಾನ ಮಾಡಬೇಕಾದ ಸಂದರ್ಭಗಳು ಹಲವಾರು ಕಳೆದುಕೊಂಡ ಭೂಮಿ ಯನ್ನು ತನ್ನ ಸಾಧನೆಯಿಂದ ಬಂದ ಹಣದಲ್ಲಿ ಮರಳಿ ಖರೀದಿಸಿ ತನ್ನ ತಾಯಿಗೆ ನೀಡುತ್ತಾರೆ ಸಾಧಕಿ ತಾಯಿಗೆ ಸ್ವರ್ಗವೇ ಸಿಕ್ಕಷ್ಟು ಆನಂದ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಜೀವನಜಿ ತೆಲಂಗಾಣದ ವಾರಂಗಲ್ ಜಿಲ್ಲೆಯ ಕಲ್ಲೆಡ ಗ್ರಾಮದಲ್ಲಿ



27 ಸೆಪ್ಟೆಂಬರ್ 2003ರಲ್ಲಿ ಜನಿಸಿದರು ತಂದೆ–ಜೀವನಜಿ ಯಾದಗಿರಿ ಮತ್ತು ತಾಯಿ–ಜೀವನಜಿ ಧನಲಕ್ಷ್ಮಿ ಅವರಿಗೆ ಅರ್ಧ ಎಕರೆ ಕೃಷಿ ಭೂಮಿ ಇತ್ತು ಮತ್ತು ಇತರರ ತೋಟಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು.

ವಾರಂಗಲ್‌ನಲ್ಲಿ 9 ನೇ ತರಗತಿ ಅಭ್ಯಾಸ ಮಾಡುವಾಗ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಆಕೆಯನ್ನು ಗುರುತಿಸಿದರು ನಂತರ, ಅವರು ಜೂನಿಯರ್ ತಂಡದ ಭಾರತೀಯ ಕೋಚ್ ಆಗಿದ್ದ ರಮೇಶ್ ಅಡಿಯಲ್ಲಿ ತರಬೇತಿ ಆರಂಭಿಸಿದರು.

ಪುಲ್ಲೇಲ ಗೋಪಿಚಂದ್ ಬೆಂಬಲಿಸಿ ಪ್ರೋತ್ಸಾಹಿಸಿ ಅವರು ಹೈದರಾಬಾದ್‌ನಲ್ಲಿರುವ ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಸಬಲೀಕರಣಕ್ಕಾಗಿ ರಾಷ್ಟ್ರೀಯ ಸಂಸ್ಥೆಯಲ್ಲಿ ಪರೀಕ್ಷೆಗೆ ಒಳಪಡುವಂತೆ ಸಲಹೆ ನೀಡಿದರು. ಅಲ್ಲಿ, ಸಂಬಂಧಿತ ಪರೀಕ್ಷೆಗಳ ನಂತರ ಆಕೆಗೆ ಮಾನಸಿಕ ದುರ್ಬಲ ವರ್ಗದ ಅಡಿಯಲ್ಲಿ ಪ್ರಮಾಣೀಕರಿಸಲಾಯಿತು ಮತ್ತು ಅದು ಆಕೆಗೆ ಪ್ಯಾರಾ ಅಥ್ಲೀಟ್ ಆಗಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿತು.

ಟಿ–20 ಎಂದರೆ ಬೌದ್ಧಿಕ ದುರ್ಬಲತೆ ಹೊಂದಿರುವ ಕ್ರೀಡಾಪಟುಗಳಿಗೆ ಮೀಸಲಿಟ್ಟಿರುವ ಕ್ರೀಡಾವರ್ಗ.

21 ವರ್ಷ ಹರೆಯದ ಈ ಕ್ರೀಡಾ ಸಾಧಕಿ ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಸಾಧನೆ ಮತ್ತು ದಾಖಲೆಗಳನ್ನು ನಿರ್ಮಿಸಿ ಭಾರತದ ಕೀರ್ತಿ ಬೆಳಗಲಿ ಎಂದು ಹಾರೈಸೋಣ.

### ಕ್ರೀಡಾ ಸಾಧನೆಗಳು

ದೀಪ್ತಿ ಪ್ಯಾರಿಸ್ 2024 ಪ್ಯಾರಾ ಒಲಿಂಪಿಕ್ಸ್ ನಲ್ಲಿ ಇತಿಹಾಸ ನಿರ್ಮಿಸಿದರು ಮಹಿಳೆಯರ 400 ಮೀಟರ್ ಟಿ–20 ವರ್ಗದಲ್ಲಿ ಕಂಚಿನ ಪದಕದೊಂದಿಗೆ ಪ್ಯಾರಾಲಿಂಪಿಕ್ ಪದಕ ಗೆದ್ದ ಮೊದಲ ಬೌದ್ಧಿಕವಾಗಿ ದುರ್ಬಲಗೊಂಡ ಭಾರತೀಯ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

2024 ರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ 55.06 ಸೆ.ಗಳ ವಿಶ್ವ ದಾಖಲೆಯನ್ನು ನಿರ್ಮಿಸಿದರು.

ಜೀವಂಜಿ 2022 ರ ಹ್ಯಾಂಗ್‌ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾಗವಹಿಸಿದ ಭಾರತೀಯ ತಂಡಕ್ಕೆ ಆಯ್ಕೆಯಾದರು.

ಏಷ್ಯನ್ ಪ್ಯಾರಾ ದಾಖಲೆಯೊಂದಿಗೆ ಚಿನ್ನದ ಪದಕ, 24 ಅಕ್ಟೋಬರ್ 2023 ರಂದು ತನ್ನ ಪೆಟ್ ಈವೆಂಟ್‌ನಲ್ಲಿ 400 ಮೀ ಓಟದಲ್ಲಿ ಗೇಮ್ಸ್ ದಾಖಲೆ ನಿರ್ಮಿಸಿದ್ದಾರೆ.

ಭುವನೇಶ್ವರದಲ್ಲಿ ನಡೆದ ಅಖಿಲ–ಭಾರತೀಯ ಅಂತರ–ವಿಶ್ವ ವಿದ್ಯಾಲಯ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನದ ನಂತರ ಮೇ ತಿಂಗಳಲ್ಲಿ 100 ಮೀ ಮತ್ತು 200 ಮೀ (ಪ್ರವರ್ಗ ಎಫ್) ನಲ್ಲಿ ಕೋಬೆ, ಜಪಾನ್ ಚಾಂಪಿಯನ್‌ಶಿಪ್‌ನಲ್ಲಿ 2024ರ ವಿಶ್ವ ಪ್ಯಾರಾಲಿಂಪಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ ಭಾರತೀಯ ತಂಡಕ್ಕೆ ಅವರು ಆಯ್ಕೆಯಾದರು.

ಇದಕ್ಕೂ ಮೊದಲು, ಅವರು 56.18 ಸೆಕೆಂಡ್‌ಗಳಲ್ಲಿ ಹೊಸ ಏಷ್ಯನ್ ದಾಖಲೆಯನ್ನು ನಿರ್ಮಿಸುವ ಮೂಲಕ ಫೈನಲ್‌ಗೆ ಅರ್ಹತೆ ಪಡೆದರು ಮತ್ತು ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್ ಕೋಟಾವನ್ನು ಪಡೆದರು.

ಘೋಟು ಭಾಯ್ ಪುರಾನಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಇಂಡಿಯನ್ ಯು–20 ಫೆಡರೇಶನ್ ಕಪ್‌ನಲ್ಲಿ 100 ಮೀ (ಕೆಟಗರಿ ಎಫ್) ನಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ.

# ಸೊರಗುತ್ತಿವೆ ತಾಯಿ ಪ್ರೀತಿ ತೋರಿದ ಊರಂಗಡಿಗಳು ನಮ್ಮೂರ ದಿನಸಿ ಅಂಗಡಿಗಳಿಗೆ ಉಸಿರಾಗೋಣ

## ಸ್ಥಳೀಯರು ಮನಸ್ಸು ಮಾಡಿದರೆ ಗುಣಮಟ್ಟದ ಆಹಾರ ಪಡೆಯುವುದರ ಜೊತೆ ಸ್ಥಳೀಯರಿಗೆ ಉದ್ಯೋಗವೂ ಕಲ್ಪಿಸಬಹುದು

ಮನುಷ್ಯ ನೆಲ ನೀರಿಗೆ ಹೊಂದಿಕೊಂಡು ಮನೆಯನ್ನು ಕಟ್ಟಿಕೊಂಡು ಬದುಕು ಮಾಡುವುದಕ್ಕೆ ಶುರು ಮಾಡಿದ ತರುವಾಯ ಊರು ಅಂಬೋದು ಹುಟ್ಟಿಕೊಂಡಿತು. ಈ ಊರು ರಸ್ತೆಯಿಂದ ಶುರುವಾಗಿ ಮಠ–ಮಂದಿರ, ಅಂಗಡಿ–ಮಳಿಗೆ, ಕೆರೆ–ಬಾವಿ, ಗುಡಿಸಲು ಮತ್ತು ಓಣಿಗಳಿಂದ ಕೂಡಿಕೊಂಡಿತ್ತು. ಬಹು ಮುಖ್ಯವಾಗಿ ಊರಿನ ನಡುವಿಗೆ ಜನರ ಸಂಪರ್ಕಕ್ಕೆ ಒಳಗಾಗಿರುವ ಅಂಗಡಿಗಳು ಅಲ್ಲಿನ ಜನರ ಹಸಿವನ್ನು ತಣಿಸಿ ಜೀವಕ್ಕೆ ಬಲ ನೀಡಿದ್ದವು ಎಂದರೆ ತಪ್ಪಾಗಲಾರದು. ದಿನಸಿ ಅಂಗಡಿ, ಕಿರಾಣಿ ಅಂಗಡಿ, ಜನರಲ್ ಸ್ಟೋರ್ ಎಂಬೆಲ್ಲ ತಲೆ ಪಟ್ಟಿಯನ್ನು ಹೊತ್ತುಕೊಂಡು ಮನುಷ್ಯನ ನಿತ್ಯದ ಬದುಕಿಗೆ ಬೇಕಾದ ಸಾಹಿತ್ಯವನ್ನು ತುಂಬಿಕೊಂಡಿಕೊಂಡಿರುವ ಈ ಅಂಗಡಿಗಳು ಉಪ್ಪಿನಿಂದ ಹಿಡಿದು ಅಕ್ಕಿ, ಬೇಳೆ, ಕಾಳು, ಮೆಣಸು, ಮಸಾಲೆ, ಸೋಪು, ಹಲ್ಲಿನಪುಡಿ, ತರಕಾರಿ, ಪಾತ್ರೆ–ಪಗಡೆಗಳಂತಹ ನೂರೆಂಟು ವಸ್ತುಗಳು ಸಿಗುತ್ತವೆ. ಪರಂಪರಗತವಾಗಿ ಇಂತಹ ಅಂಗಡಿಗಳು ಊರಿನ ಜನ ಅಗತ್ಯತೆಯನ್ನು ಪೂರೈಸುತ್ತಾ ತಾನು ಬೆಳೆಯುತ್ತ ಬಂದಿವೆ.

ಅಂಗಡಿಯ ವ್ಯವಹಾರವು ಹಣ ನೆಲೆಯನ್ನು ಅಪ್ಪಿಕೊಂಡರೂ ಇಲ್ಲಿ ನಂಬಿಕೆಯ ಬಿಗುವಾಗ ಸ್ಪರ್ಶವಿದೆ. ವಾರದಲ್ಲಿ ಒಮ್ಮೆ ಹಣವನ್ನು ನೀಡಿ ಉಳಿದಂತೆ ತಮಗೆ ಬೇಕಾದ ಸಾಹಿತ್ಯವನ್ನು ಉದುರಿಯಾಗಿ ಕೊಂಡು ಹೋಗುವವರಿದ್ದಾರೆ; ತಿಂಗಳಿಗೆ ಹಣ ನೀಡುವವರಿದ್ದಾರೆ; ಇನ್ನು ವರ್ಷಕ್ಕೆ ಒಮ್ಮೆ ಬಾಕಿಯ ಹಣ ನೀಡಿ ಹೊಸ ಲೆಕ್ಕ ಶುರು ಮಾಡುವ ಜನರು ಇದ್ದಾರೆ; ಈ ನಡುವೆ ಅಂಗಡಿಯನ್ನು ಹೊಂದಿರುವ ಮಾಲೀಕರು ವಿಶ್ವಾಸದ ನೆಲೆಯಲ್ಲಿ ತಮ್ಮ ಕೆಂಪು ರಟ್ಟಿನ ಪುಸ್ತಕದ ಮೇಲೆ ಸಾಲದ ರೂಪದಲ್ಲಿ ಸಾಹಿತ್ಯ ಕೊಂಡು ಹೋದ ವ್ಯಕ್ತಿಯ ಹೆಸರನ್ನು ಬರೆದು ಅದರ ಕೆಳಗೆ ಅವನು ಕೊಡಬೇಕಾದ ಮೊತ್ತವನ್ನು ನಮೂದಿಸುತ್ತ ಹೋಗುವುದಿದೆ. ವರ್ಷದಲ್ಲಿ ಕೆಲವು ಜನರು ಕೊನೆಗೆ ಹಣವನ್ನು ಕೊಡದೆ ಹಿಡಿಸಿ ಹೋಗುವುದು ಸಾಮಾನ್ಯ ವಾಗಿದೆ. ಈ ರೀತಿಯ ಅಂಗಡಿಯ ವ್ಯವಹಾರವನ್ನು ಊರಿನಲ್ಲಿ ಜನರು ಹೊಂದಿ ರುವುದು ಕಾಣುತ್ತೇವೆ. ಇಲ್ಲಿ ನಾವು ಯೋಚಿಸಬೇಕಾದ ವಿಚಾರ ವೆಂದರೆ ಹಣವಿಲ್ಲ ವಾದರೂ ತನಗೆ ಅಗತ್ಯ ಅನ್ನಿಸುವ ಅಕ್ಕಿ ಬೇಳೆಯನ್ನು ಸಾಲ ಬರೆಸಿ ಪಡೆಯಬಹುದು. ಮನೆ ಯಲ್ಲಿ ಬೆಲ್ಲವೋ, ಸಕ್ಕರೆಯೋ ಮುಗಿದಿದೆ ಅನ್ನುವಾಗ ಯಾರಾದರೂ ನೆಂಟರು ಬಂದರೇ ಅಯ್ಯೋ ಮನೆಯ ಮರ್ಯಾದೆ ಹೋಗುವ ಮೊದಲು ಅಂಗಡಿಯ ಬಾಗಿಲಿಗೆ ಮಕ್ಕಳನ್ನು ಅಟ್ಟಿ ಬೇಕಾದ ಸಾಹಿತ್ಯವನ್ನು ಸಾಲದ ಲೆಕ್ಕದಲ್ಲಿ ತಂದು ಅವರನ್ನು ಸುಧಾರಿಸಿ ಕಳಿಸುವುದು ಇದೆ. ನಮ್ಮೂರ ಅಂಗಡಿಗಳು ನಮಗೆ ಆಪ್ತ ಬಂಧುಗಳಾಗಿ ನಮ್ಮೊಂದಿಗೆ ಜೀವಂತವಾಗಿದ್ದವು ಈಗ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುವ ಕಡೆಗೆ ಹೆಜ್ಜೆ ಹಾಕುತ್ತಿವೆ. ನಮ್ಮ ನೆಲದ ಸತ್ವಗಳು ಬಹುರಾಷ್ಟ್ರೀಯ ಮಾರುಕಟ್ಟೆಯ ಬಾಯಿಗೆ ಸಿಕ್ಕಿ ಗೌಣವಾಗುತ್ತಿರುವುದು ತಮ್ಮ ಅರಿವಿಗೆ ಸರಿಯಾಗಿ ದಕ್ಕಿದಂತಿಲ್ಲ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಕಳೆದ ಮೂರು–ನಾಲ್ಕು ವರ್ಷಗಳಲ್ಲಿ ನಮ್ಮ ಗ್ರಾಹಕರ ಮನೋಭಾವ ಅಭಿವ್ಯಕ್ತಿಯು ಪಲ್ಲಟವಾಗಿದೆ. ಅಂಗಡಿಗೆ ಹೋಗಿ ಬೇಕಾದ ಸಾಹಿತ್ಯಕೊಂಡು ತರುತ್ತಿದ್ದವರು ಈಗ ಡಿ–ಮಾರ್ಟ, ಸೂಫರ್ ಮಾರ್ಕೇಟ್, ಮೋರ್‌ಗಳಂತಹ ಸಂಕೀರ್ಣಗಳಿಗೆ ಹೋಗಿ ತಾವೇ ಬೇಕಾದನ್ನು ಟಬ್ಬುಗಳಿಗೆ ಹಾಕಿಕೊಂಡು ಬಿಲ್ಲಿಂಗಿನ ಮುಂದೆ ನಿಂತುಕೊಂಡು ಅವರು ಹೇಳಿದ ಹಣವನ್ನು ಪೇ–ಮಾಡಿ ಬರುತ್ತಿದ್ದಾರೆ. ಇನ್ನೂ ಕೆಲವರು ಆನ್ಲೈನ್ ಮೂಲಕ ತಮಗೆ ಬೇಕಾದ ವಸ್ತುಗಳನ್ನು ಹುಡುಕಿ ಅಮೇಜಾನ್, ಫ್ಲಿಬ್ಕಾರ್ಟ, ಮಿಂತ್ರಾ ಇತ್ಯಾದಿ ಸ್ಮಾರ್ಟ ಆಪ್ಗಳಲ್ಲಯೇ ತರಿಸಿಕೊಂಡು ಬದುಕು ಮಾಡುವ ಕಡೆಗೆ ನಡೆಯುತ್ತಿದ್ದಾರೆ ಇದು ಎಷ್ಟು ಉನ್ನತಕ್ಕೆ ಏರಿದೆ ಎಂದರೆ ಅಕ್ಕಿಯನ್ನು ಕೊಳ್ಳದೇ ಒಲೆಗೆ ಬೆಂಕಿಯನ್ನು ಹಚ್ಚದೇ ಹೊಟ್ಟೆಯ ಅನ್ನವನ್ನು ಎಲ್ಲಿಂದಲೋ ಪ್ಯಾಕೆಟಿನಲ್ಲಿ ತರಿಸಿ ತಿಂದುಂಡು ದಿನದ ಹಸಿವನ್ನು ದಾಟಿಸಿವುದು ನಿತ್ಯದ ಬದುಕಾಗಿ ಕಾಣಿಸುತ್ತಿದೆ. ಈ ರೀತಿಯ ಗ್ರಾಹಕತೆಯ ಮನೋಭಾವವು ನಮ್ಮದೇ, ನಮ್ಮ ಬದುಕಿನ ದಾರಿಯಲ್ಲಿ ನೂರಾರು ವರ್ಷಗಳಿಂದ ಅಕ್ಕಿ–ಬೇಳೆಯನ್ನು ನೀಡಿ ಬದುಕಿಸಿದ ಅಂಗಡಿಗಳನ್ನು ಬಾಗಿಲು ಹಾಕಿಸುವಂತೆ ಮಾಡಿದೆ. ವಿದೇಶೀಯ ವ್ಯವಹಾರದ ಮಧ್ಯವರ್ತಿ ಕಂಪೆನಿಗಳು ವಾರ್ಷಿಕವಾಗಿ ಕೋಟ್ಯಾಂತರ ಹಣವನ್ನು ಮಾಡಿಕೊಂಡು ತನ್ನ ವ್ಯವಹಾರವನ್ನು ವಿಸ್ತರಿಸಿಕೊಳ್ಳುತ್ತಿವೆ. ಇಲ್ಲಿ ನಮಗೆ ಯಾರ ಗುರುತು ಪರಿಚಯವಿಲ್ಲ. ಹಣವಿಲ್ಲದಿದ್ದರೇ ಯಾವ ವಸ್ತುವು ನಮಗೆ ಸಾಲದ ರೂಪದಲ್ಲಿ ಜೀವ ಹೋಗುತ್ತದೆ ಎಂದರೇ ಸಿಗುವುದಿಲ್ಲ. ನಾವು ಮೋಸ ಹೋಗುತ್ತಿದ್ದೇವೆ ಎನ್ನುವ ಅರಿವು ನಮಗಿದ್ದರೂ ನಾವುಗಳು ಅಂತಸ್ಥಿನ ಭಾಗವಾಗಿ ಆನ್ಲೈನ್ ಗ್ರಾಹಕರಾಗಿ ವರ್ತಿಸುತ್ತಿದ್ದೇವೆ. ಈ ನಡುವೇ ಊರಿನ ಮುಂದಿದ್ದ ಕಿರಾಣಿ ಅಂಗಡಿಗಳು ತಣ್ಣಗೆ ಬಾಗಿಲು ಮುಚ್ಚಿಕೊಂಡು ತನ್ನ ಉಸಿರನ್ನು ಕಳೆದುಕೊಂಡು ಬರಿದಾಗಿವೆ. ನೆಂಟರು ಬಂದಿದ್ದಾರೆ ಮನೆಯಲ್ಲಿ ಅಡುಗೆ ಸಾಹಿತ್ಯವಿಲ್ಲ ಅಂತ ಅಂಗಡಿಗೆ ಯಾರನ್ನಾದರೂ ಕಳಿಸುವುದಕ್ಕೆ, ಮನೆಯಲ್ಲಿ ದುಡಿತವಿಲ್ಲ ಬಾರಿ ಕಷ್ಟವಾಗಿ ಒಂದು ವಾರ ಮತ್ತೆ ಹಣ ಕೊಡುತ್ತೇನೆ ಅಡುಗೆಗೆ ಚೂರು ಸಾಹಿತ್ಯ ಸಾಕು ಅನ್ನೋ ಮಾತು ಹೇಳಿ ಸಾಹಿತ್ಯವನ್ನು ತರುವುದಕ್ಕೆ ನಮ್ಮ ಪರಿಸರಲ್ಲಿ ನಮ್ಮ ಸಂಬಂಧವನ್ನು ಹೊಂದಿರುವ ಅಂಗಡಿಗಳು ಈಗ ಇಲ್ಲ, ಡಿ–ಮಾರ್ಟನಂತಹ ಮಾಲುಗಳು ನಮ್ಮಲ್ಲಿ ಹಣವಿಲ್ಲದಿದ್ದರೇ ಯಾವ ವಸ್ತುವನ್ನು ನೀಡುವುದಿಲ್ಲ. ನಮ್ಮ ಕಷ್ಟ, ನೋವು, ಸಂವೇದನೆಗಳನ್ನು ಆನ್ಲೈನ್ ವ್ಯಾಪಾರವು ಪರಿಗಣಿಸುವುದೂ ಇಲ್ಲ ಎನ್ನುವುದು ನಮಗೆ ತಿಳಿಯಬೇಕಾದ ಸತ್ಯ ಸಂಗತಿಯಾಗಬೇಕು.

ನಮ್ಮೂರಿನಲ್ಲೂ ನಾವು ಚಿಕ್ಕವರಿದ್ದಾಗ ಮೂರು ನಾಲ್ಕು ಅಂಗಡಿಗಳು ಇದ್ದವು. ನಾವು ಅದೇ ಅಂಗಡಿಯಿಂದ ಮನೆಗೆ ಬೇಕಾದ ಸಾಹಿತ್ಯ ತರುತ್ತಿದ್ದೆವು. ವಾರದ ಕೊನೆಯಲ್ಲಿ ಅಪ್ಪ ಹಣವನ್ನು ನೀಡುತ್ತಿದ್ದ ಆದರೂ ಬಾಕಿ ಉಳಿಯುತ್ತಿತ್ತು ಅದನ್ನು ವರ್ಷದ ಕೊನೆಯಲ್ಲಿ ನೀಡಿ ಲೆಕ್ಕ ಶೂನ್ಯವಾಗಿಸುತ್ತಿದ್ದ. ಹೀಗಿದ್ದ ಕಾಲದಲ್ಲಿ ಅಪ್ಪನಿಗೆ ದುಡಿಯುವಾಗ ಕಾಲಿಗೆ ಕತ್ತಿ ಬಿದ್ದು ನಡೆಯುವುದಕ್ಕೆ ಆಗಲಿಲ್ಲ ಆಗ ನಮಗೆ ಕಷ್ಟವು ಎದುರು ನಿಂತು ಬಿಟ್ಟಿತು. ಅಪ್ಪನ ದುಡಿಮೆಯಿಂದಲೇ ಉಣ್ಣಬೇಕಾಗಿದ್ದರಿಂದ ಗಂಜಿಯ



ಚಿಂತೆಯಾಗಿತ್ತು ಈ ನಡುವೆ ಗುರುಪ್ಪಗೌಡರು ತಮ್ಮ ಅಂಗಡಿಯಿಂದ ಆರು ತಿಂಗಳ ತನಕ ಅಡುಗೆ ಸಾಹಿತ್ಯ ಕೊಟ್ಟು ಆರೋಗ್ಯ ಸರಿಯಾದ ಮೇಲೆ ಹಣ ಕೊಡಿ ಎಂದಿದ್ದರು. ಇಂತಹ ಕೆಲಸವನ್ನು ಅದೆಷ್ಟೋ ಅಂಗಡಿಗಳು ನಮ್ಮ ಊರಿನ ಜನರಿಗೆ ಕಷ್ಟ ಅಂದಾಗ ಉಪಕಾರ ಮಾಡಿ ಅವರ ಬದುಕನ್ನು ಗೆಲುವಾಗಿ ಇಟ್ಟಿದೆ. ಈ ಸಂಬಂಧವನ್ನು ಮರೆತು ನಾವು ಮಾಲುಗಳಲ್ಲಿ ಹಾಗೂ ಆನ್ಲೈನ್ಗಳಲ್ಲಿ ಸಾವಿರಾರು ರೂಪಾಯಿಯ ವ್ಯವಹಾರ ಮಾಡುತ್ತಿದ್ದೇವೆ ಯಾರೋ ದೂರದ ಬಂಡವಾಳಿಗಾರರ ಜೇಬನ್ನು ತುಂಬುತ್ತಿದ್ದೇವೆ. ಆದರೆ ನಮ್ಮ ನೆಲದ ಸತ್ವವನ್ನು ಜತನವಾಗಿಟ್ಟುಕೊಂಡು ನಮ್ಮೊಂದಿಗೆ ಬದುಕಿದ ಅದೆಷ್ಟೋ ಸ್ಥಳೀಯ ಅಂಗಡಿಗಳನ್ನು ಮುಚ್ಚುವಂತೆ ಮಾಡಿರುವ ನಮ್ಮ ಮನೋಭಾವವೆ ಪಲ್ಲಟವಾಗಬೇಕಾಗಿದೆ. ಸ್ಥಳೀಯವಾದ ಅಂಗಡಿಗಳನ್ನೇ ಬಹುದೊಡ್ಡ ಸಂಕೀರ್ಣವಾಗಿಸಿ ನಾವುಗಳೆಲ್ಲ ಬೆಳೆಸಬೇಕು ಆಗ ನಮ್ಮ ಮುಂದಿನ ಅನ್ನದ ದಾರಿಯನ್ನು ಮೌಲ್ಯಯುತವಾಗಿಸಬಹುದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಗಾಡಿ ಬಂತು ನೋಡು ಮಗು

ಕಸವ ಎಲ್ಲೆಂದರಲ್ಲಿ ಚೆಲ್ಲದಿರು
ಮನೆಯ ಸುತ್ತ ಮುತ್ತ ಇರಲಿ ಸ್ವಚ್ಛ
ಹಸಿ ಕಸ ಒಣ ಕಸ ಬೇರೆಬೇರೆ ಇರಲಿ

ಗಾಡಿ ಬಂತು ನೋಡು ಮಗು
ಕಸವನ್ನು ಹೊತ್ತು ತಂತು
ನಮ್ಮ ಸರದಿ ಬರುತಲಿ
ಕಸವ ಹಾಕೋಣ ಗಾಡಿಯಲಿ

ಕಸದ ಜೊತೆಗೆ ನಾವು ಇರಲು
ಬರುವುದು ರೋಗ ರುಜನೆಯು
ಸ್ವಚ್ಛವಾಗಿರೆ ಪರಿಸರ ರೋಗದಿಂದ
ನಾವು ಮುಕ್ತರಾಗುವೆವು.

– ಸುವರ್ಣಾ ಭಟ್ಟ.

### ಅಂಬೇಡ್ಕರ್ ಅಂದ್ರೆ.....

ಹುಳಿ ಪೆಟ್ಟು ತಿಂದು ಒಡಮೂಡಿದ ಶಿಲ್ಪ...
ಶಾಂತ ಚಿತ್ತ ಮನದ ಪ್ರತಿರೂಪ......

ಅಂಬೇಡ್ಕರ್ ಅಂದ್ರೆ......
ಜ್ಞಾನ ಬಲಕೆ ನಿದರ್ಶನ
ಕೊರಡೂ ಕೊನರುವ ನವ ಚೇತನ.....

ಅಂಬೇಡ್ಕರ್ ಅಂದ್ರೆ.....
ಬರಿ ವ್ಯಕ್ತಿಯಲ್ಲ ಅಗಾಧ ಶಕ್ತಿ!
ಬಾಳ ಗೆಲುವಿಗೆ ಯುಕ್ತಿ!....

ಅಂಬೇಡ್ಕರ್ ಅಂದ್ರೆ.....
ಸಂವಿಧಾನ..... 'ಸಮದಾನ'
ಸರ್ವರೇಳ್ಗೆಯ ಬಯಸೋ ದಿಗ್ದರ್ಶನ!..

ಅಂಬೇಡ್ಕರ್ ಅಂದ್ರೆ.....
ಮೂಡುವುದು ಮೈಮನದಿ ಸಾಧಿಸೋ
ಛಲ!....
ಜಗದೇಳ್ಗೆಗೆ ಹಗಲಿರುಳು ದುಡಿಯೋ
ಹಂಬಲ.....

– ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ.

# ಸಿದ್ಧತೆ ಇಲ್ಲದೆ ಸಭೆಗೆ ಬಂದ್ರೆ ಶಿಸ್ತು ಕ್ರಮ

ಮೊದಲ ಪುಟದಿಂದ

ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಾಕೀತು ಮಾಡಿದರು. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಒಂದು ಗ್ರಾಮ ಪಂಚಾಯ್ತಿಯನ್ನು ಆಯ್ಕೆ ಮಾಡಿಕೊಂಡು ಸಮಗ್ರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಮಾದರಿ ಗ್ರಾಪಂಯನ್ನಾಗಿಸಲು ಯೋಜನೆ ರೂಪಿಸಲು ತಿಳಿಸಿ ಇದಕ್ಕೆ ಬೇಕಾದ ಅನುದಾನವನ್ನು ಸಿಎಸ್‌ಆರ್ ಯೋಜನೆಯಡಿ ಒದಗಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ದಾಳಿಂಬೆ, ಮಾವು, ಡ್ರ್ಯಾಗನ್ ಫ್ರೂಟ್ ಬೆಳೆಗೆ ರೈತರು ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಇದಕ್ಕೆ ಉತ್ತೇಜನವಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೈತರಿಗೆ ಕೃಷಿ, ತೋಟಗಾರಿಕೆ ಪರಿಕರಗಳನ್ನು ವಿತರಣೆ ವಿತರಣೆ ಮಾಡಬೇಕು. ಕೂಡ್ಲಿಗಿಯಲ್ಲಿ ಹುಣಸೆ ಹಣ್ಣಿನ ಸಂಗ್ರಹ ಘಟಕ ಸ್ಥಾಪನೆಗೆ ಶೀಘ್ರ ಕ್ರಮವಹಿಸಲು ಸೂಚಿಸಿದರು.

ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೇಷ್ಮೆ ಬೆಳೆಗಾರರಿದ್ದಾರೆ. ಕೊಟ್ಟೂರಿನಲ್ಲಿ ನೂಲು ಬಿಚ್ಚುವ ಕೇಂದ್ರ ಆರಂಭಿಸಲು ಯೋಜನೆ ರೂಪಿಸಿ ವರದಿ ಸಲ್ಲಿಸಲು ತಿಳಿಸಿ, ಪಶು ಇಲಾಖೆಯಿಂದ ಜಿಲ್ಲೆಯ ಎಲ್ಲಾ ಜಾನುವಾರು ಚಿಕಿತ್ಸಾ ಕೇಂದ್ರಗಳಲ್ಲಿ ಅಗತ್ಯ ಲಸಿಕೆಗಳ ಕೊರತೆಯಾಗದಂತೆ ನಿಗಾವಹಿಸಿ ಅಗತ್ಯವಿದ್ದರೇ ಶಾಸಕರ, ಸಂಸದರ ಶಿಫಾರಸ್ಸು ಪತ್ರ ಪಡೆದು ಸಂಗ್ರಹಕ್ಕೆ ಮುಂದಾಗಬೇಕು ಎಂದರು.

ಅಂಗನವಾಡಿ, ಶಾಲೆಗಳು ಮತ್ತು ಸ್ಮಶಾನಗಳ ನಿವೇಶನಗಳ ಸಮಸ್ಯೆಗಳಿದ್ದರೇ ಜಿಲ್ಲಾಧಿಕಾರಿಗಳು ಸಮಸ್ಯೆ ಇತ್ಯರ್ಥಗೊಳಿಸಬೇಕು. ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲು ಸಿದ್ದರಿದ್ದೇವೆ. ಯಾವುದೇ ಕಟ್ಟಡಗಳು ಬಾಡಿಗೆ ಅಧಾರಿತ ಹಾಗೂ ಶೀಥಿಲಾವಸ್ಥೆಯಲ್ಲಿರದಂತೆ ಕಾಳಜಿ ವಹಿಸಿ ಶೈಕ್ಷಣಿಕ ಪ್ರಗತಿಗೆ ಅಂಗನವಾಡಿಗಳು ಬುನಾದಿ ಇದ್ದಂತೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಾತ ನಾಡಿ, ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ವಿಶೇಷ ತರಗತಿಗಳನ್ನು ಆಯೋಜಿಸಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಸಕ್ರಿಯ ಅಭ್ಯಾಸಕ್ಕೆ ಉತ್ತೇಜನ ನೀಡಲಾಗುತ್ತಿದೆ. ಹದಿನೈದು ದಿನಕ್ಕೊಮ್ಮೆ ಪರೀಕ್ಷೆ ಆಯೋಜನೆ. ಒಟ್ಟು ಜಿಲ್ಲೆಯಲ್ಲಿ 23,766 ವಿದ್ಯಾರ್ಥಿಗಳು ನೊಂದಾಯಿತರಾಗಿದ್ದಾರೆ ಎಂದು ಸಭೆಗೆ ತಿಳಿಸಿದಾಗ ಸಂಸದರು ಪ್ರತಿಕ್ರಿಯಿಸಿ ಈ ಬಾರಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಪರೀಕ್ಷಾ ಕೈಪಿಡಿ ಸಿದ್ಧಪಡಿಸಿ, ಸ್ವಂತ ವೆಚ್ಚದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನಾನೇ ಉಚಿತವಾಗಿ ನೀಡುತ್ತೇನೆ. ಈ ಬಾರಿ ಫಲಿತಾಂಶದಲ್ಲಿ ಬಳ್ಳಾರಿ ಮತ್ತು ವಿಜಯನಗರ ಉನ್ನತ ಸ್ಥಾನದಲ್ಲಿರುವಂತೆ ಅಧಿಕಾರಿಗಳು ವಿಶೇಷ ಕಾಳಜಿ ವಹಿಸುವಂತೆ ಸೂಚಿಸಿದರು.

ಶಾಸಕ ಕೆ.ನೇಮಿರಾಜನಾಯ್ಕ ಮಾತನಾಡಿ, ರೈತರ ವಿಮೆ ವಿಚಾರದಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ರೈತರ ಹೆಸರಿನಲ್ಲಿ ಯಾರೋ ಹಣ ಹಾಕಿ ಬೆಳೆಹಾನಿ ಬಳಿಕ ವಿಮೆ ಹಣವನ್ನು ಪಡೆಯುತ್ತಿದ್ದಾರೆಂಬ ಮಾಹಿತಿ ಇದ್ದು ಇದಕ್ಕೆ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಖರೀದಿ ಕೇಂದ್ರಗಳ ಸಮರ್ಪಕವಾಗಿ ಮಾಹಿತಿಯನ್ನು ರೈತರಿಗೆ ನೀಡುವಂತೆ ತಿಳಿಸಿದರು.

ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ಆರೋಗ್ಯ ಇಲಾಖೆಯಿಂದ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಡಯಾಲಿಸಿಸ್ ಸೇವೆ ನೀಡಲು ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಲು ಕ್ರಮವಹಿಸಬೇಕು ಎಂದರು.

ಸಭೆಯಲ್ಲಿ ಶಾಸಕಿ ಲತಾ ಮಲ್ಲಿಕಾರ್ಜುನ, ಹೂವಿನಹಡಗಲಿ ಶಾಸಕ ಕೃಷ್ಣನಾಯ್ಕ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.




## ದಿಶಾ ಸಭೆಯಲ್ಲಿ ಸಾರ್ವಜನಿಕರಿಂದ 180 ಅಹವಾಲುಗಳ ಸ್ವೀಕಾರ

**ಹಂಪಿ ಟೈಮ್ಸ್ ಹೊಸಪೇಟೆ:**
ಕೇಂದ್ರ ಸರ್ಕಾರದ ಯೋಜನೆಗಳು ಸಾಮಾನ್ಯ ಜನರಿಗೆ ತಲುಪಿಸಲು ಜಿಲ್ಲಾ ಕೇಂದ್ರದಲ್ಲಿ ನಡೆಯಬೇಕಿದ್ದ ದಿಶಾ ಸಭೆಯನ್ನು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆಸಲಾಗುತ್ತದೆ ಎಂದು ಸಂಸದರಾದ ಈ.ತುಕಾರಾಮ್ ತಿಳಿಸಿದರು.

ಹಗರಿಬೊಮ್ಮನಹಳ್ಳಿ ಪಟ್ಟಣದ ಹಗರಿ ಆಂಜನೇಯ ದೇವಸ್ಥಾನದ ಆವರಣದ ಮುಂದೆ ಏರ್ಪಡಿಸಿದ್ದ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಸೋಮವಾರ ಮಾತನಾಡಿದರು, ಪಕ್ಷಾತೀತವಾಗಿ ಸಾರ್ವಜನಿಕ ಸಮಸ್ಯೆಗಳನ್ನು ಅಲಿಸಲು, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳ ಬೇಡಿಕೆಗಳನ್ನು ಪಡೆಯಲು ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮ ಸಾಕಾರಗೊಳ್ಳಲಿದೆ. ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೇ ಸಾರ್ವಜನಿಕರಿಗೆ ಅಗತ್ಯವಿರುವ ವಿವಿಧ ಇಲಾಖೆಗಳ ಸೌಲಭ್ಯಗಳ ಪಡೆಯಲು ಅಹವಾಲು ನೀಡಬೇಕು ಎಂದರು.

ದಿಶಾ ಸಭೆಯ ನಿಮಿತ್ತ ಏರ್ಪಡಿಸಿದ್ದ ಅಹವಾಲು ಸ್ವೀಕಾರದಲ್ಲಿ ಒಟ್ಟು 180 ಅರ್ಜಿಗಳು ಸ್ವೀಕೃತವಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 34 ಅರ್ಜಿಗಳು, ಪುರಸಭೆ 36, ಕಂದಾಯ ಇಲಾಖೆ 45, ಇತರೆ ಇಲಾಖೆಗಳಿಂದ 65 ಅರ್ಜಿಗಳು ಸ್ವೀಕೃತವಾಗಿವೆ.

ಈ ವೇಳೆ ಹಗರಿಬೊಮ್ಮನಹಳ್ಳಿ ಪುರಸಭೆ ಅಧ್ಯಕ್ಷ ವಿ.ಮರಿರಾಮಪ್ಪ, ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಆದಿಮನಿ ಹುಸೇನ್ ಸಾಬ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಹಗರಿಬೊಮ್ಮನಹಳ್ಳಿ ತಹಸೀಲ್ದಾರ ಆರ್. ಕವಿತಾ, ತಾಪಂ ಇಒ ಜಿ.ಪರಮೇಶ್ವರ ಇದ್ದರು.

# ಇಂದು ಕಾಲೇಜ್‌ಗೆ ಪ್ರಥಮ ಪಿಯುಸಿ ಪ್ರವೇಶ ನೀಡಿಲ್ಲ

### ಕಾಲೇಜ್ ಆಡಳಿತಾಧಿಕಾರಿ ಹೆಚ್.ಎನ್ ವೀರಭದ್ರಪ್ಪ ಹೇಳಿಕೆ

■ **ಹಂಪಿ ಟೈಮ್ಸ್ ಕೊಟ್ಟೂರು.**
2024–25 ರ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ತಾಲೂಕಿನ "ಇಂದು ಇನೋವೇಟಿವ್ ಪ.ಪೂ ಕಾಲೇಜ್" ಹೊರತು ಪಡಿಸಿ, ಉಳಿದ 10 ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧರಾಗಿದ್ದಾರೆ.


ಶೈಕ್ಷಣಿಕ ವರ್ಷ 2024–25ರಲ್ಲಿ ತಾಲೂಕಿನ 10 ಕಾಲೇಜ್ ಗಳ 2490 ವಿದ್ಯಾರ್ಥಿಗಳು ಪ್ರಥಮ ಪಿ.ಯು.ಸಿ ಪರೀಕ್ಷೆ ಬರೆಯಲಿದ್ದು, ಇಲ್ಲಿನ ನೋಡಲ್ ಕೇಂದ್ರ ಸರ್ಕಾರಿ.ಪ.ಪೂ. ಕಾಲೇಜ್ ಕೊಟ್ಟೂರು ಇಲ್ಲಿಗೆ ಎಲ್ಲಾ ಕಾಲೇಜು ಪ್ರಥಮ ಪಿ.ಯು.ಸಿ ವಾರ್ಷಿಕ ಪರೀಕ್ಷೆ–1 ಪ್ರಶ್ನೆ ಪತ್ರಿಕಾ ಬೇಡಿಕಾ ಪಟ್ಟಿ ಸಲ್ಲಿಸಿವೆ. ಆದರೆ ಪಟ್ಟಣದ ಪ್ರತಿಷ್ಠಿತ ರ‍್ಯಾಂಕಿಂಗ್‌ನಲ್ಲಿ ಹೆಸರು ಮಾಡಿದ ಇಂದು ಇನೋವೇಟಿವ್ ಪ.ಪೂ ಕಾಲೇಜ್' ಪ್ರಥಮ ಪಿ.ಯು.ಸಿ ಪ್ರಶ್ನೆ ಪತ್ರಿಕೆ ಬೇಡಿಕೆಗೆ ಪಟ್ಟಿಯಲ್ಲಿ ಹೆಸರಿಲ್ಲ, ಉಳಿದ 10 ಕಾಲೇಜ್ ಹೆಸರುಳ್ಳ ಪಟ್ಟಿ ಮಾತ್ರ ಹೊರಬಿದ್ದಿದೆ.

**ಕೊಟ್ಟೂರು ಇಂದು ಇನೋವೇಟಿವ್ ಪ.ಪೂ ಕಾಲೇಜ್" ಸಂಪೂರ್ಣ ಮುಚ್ಚಲು ಆಡಳಿತ ಮಂಡಳಿ ತೀರ್ಮಾನಿಸಿದೆ, ಸದ್ರಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳ ಪರೀಕ್ಷೆ ಮಾತ್ರ ನಡೆಸುತ್ತದೆ. ಕಾಲೇಜ್ ಮುಚ್ಚುವ ಕಾರಣ, ಅವರು 2024–25ರ ಪ್ರಥಮ ಪಿ.ಯು.ಸಿ ದಾಖಲಾತಿ ಮಾಡಿಕೊಂಡಿಲ್ಲ. ಇದರ ಹೊರತು ಬೇರಾವ ವಿಷಯ ನನ್ನ ಗಮನಕ್ಕಿಲ್ಲ.**

**– ಟಿ.ಪಾಲಾಕ್ಷ**
**ಡಿ.ಡಿ.ಪಿ.ಯು,ಪ.ಪೂ ಶಿಕ್ಷಣ ಇಲಾಖೆ ವಿಜಯನಗರ.**

ಇದನ್ನು ಗಮನಿಸಿದ ಪತ್ರಿಕೆಯು ನೋಡಲ್ ಕೇಂದ್ರದ ಪ್ರಚಾರ್ಯರನ್ನುಪ್ರಶ್ನಿಸಿದಾಗ,ಪ್ರಚಾರ್ಯರುಜಿ.ಸೋಮಶೇಖರಗೌಡ್ರ ನಮಗೆ ಸ್ಪಷ್ಟ ಮಾಹಿತಿ ಇಲ್ಲ ದ್ವಿತೀಯ ಪಿ.ಯು.ಸಿ ಪೂರ್ವ ಸಿದ್ದತಾ ಪರೀಕ್ಷೆಗೆ– ಮಾತ್ರ ಪ್ರಶ್ನೆ ಪತ್ರಿಕಾ ಬೇಡಿಕೆ ಆ ಕಾಲೇಜಿಂದ ಇದ್ದು, ಆ ಪಟ್ಟಿ ಮಾತ್ರ ನಮ್ಮಲ್ಲಿ ದೊರೆಯುತ್ತೆ, ಹೆಚ್ಚಿನ ಮಾಹಿತಿಗೆ ಆ ಕಾಲೇಜ್ ಆಡಳಿತ ಮಂಡಳಿ ಸಂಪರ್ಕಿಸಿ ಎಂದರು.

ಇಂದು ಇನೋವೇಟಿವ್ ಕಾಲೇಜ್ ಆಡಳಿತಾಧಿಕಾರಿ ಹೆಚ್.ಎನ್ ವೀರಭದ್ರಪ್ಪ ಅವರನ್ನು ಪ್ರಶ್ನಿಸಿದಾಗ. ಆಡಳಿತ ಮಂಡಳಿ ತೀರ್ಮಾನಿಸಿದೆ ದಾಖಲಾತಿ ಬೇಡವೆಂದು. ಆ ಕಾರಣ 2024–25ನೇ ಸಾಲಿಗೆ 'ಇಂದು ಇನೋವೇಟಿವ್ ಪ.ಪೂ.ಕಾಲೇಜ್ ಗೆ" ಪ್ರಥಮ ಪಿ.ಯು.ಸಿ ಗೆ ದಾಖಲಾತಿ ನಡೆದಿಲ್ಲ, ನೋಡಲ್ ಕೇಂದ್ರಕ್ಕೆ ಪ್ರಥಮ ಪಿಯುಸಿ ವಾರ್ಷಿಕ ಪ್ರಶ್ನೆ ಪತ್ರಿಕೆಗಳ ಬೇಡಿಕೆ ಕೊಟ್ಟಿಲ್ಲ.ಇದರ ಹೊರತಾಗಿ ಬೇರಾವ ಸಮಸ್ಯೆಗಳಿಲಿಲ್ಲ ಎಂದು ಸ್ಪಷ್ಟಪಡಿಸಿದರು.



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 20–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1620.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11239 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 64.112 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.89 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.128 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

**21–01–2025 – ಮಂಗಳವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಧೃತಿ |
| ಕರಣ | : ಭವ |
| ಸೂರ್ಯೋದಯ | : 07:11:09 |
| ಸೂರ್ಯಾಸ್ತ | : 18:05:38 |
| ರಾಹು ಕಾಲ | : 15:22–16:44 |
| ಯಮಘಂಡ ಕಾಲ | : 09:55–11:17 |
| ಗುಳಿಕ ಕಾಲ | : 12:38–14:00 |

# ಪೆನ್ಸಿಲ್ ಪತ್ರಿಕೆ ಮಕ್ಕಳ ಬರಹಕ್ಕೆ ಉತ್ತಮ ವೇದಿಕೆ

### ಗ್ರಾ.ಪಂ ಉಪಾಧ್ಯಕ್ಷ ರಮೇಶ ಚಲುವಾದಿ ಅಭಿಮತ



■ **ಹಂಪಿ ಟೈಮ್ಸ್ ಹ.ಬೊ ಹಳ್ಳಿ**
ಪೆನ್ಸಿಲ್ ಪತ್ರಿಕೆ ಮಕ್ಕಳ ಬರಹಕ್ಕೆ ಉತ್ತಮ ವೇದಿಕೆ, ಇದು ಮಕ್ಕಳಲ್ಲಿನ ಕ್ರಿಯಾಶೀಲತೆಗೆ ಹಿಡಿದ ಕನ್ನಡಿಯಾಗಿದೆ ಎಂದು ಗದ್ದಿಕೆರೆ ಗ್ರಾಮಪಂಚಾಯ್ತಿ ಉಪಾಧ್ಯಕ್ಷ ರಮೇಶ ಚಲುವಾದಿ ಅಭಿಪ್ರಾಯಪಟ್ಟರು.

ಅವರು ಸರಕಾರಿ ಪ್ರೌಢಶಾಲೆ ಗದ್ದಿಕೆರೆಯಲ್ಲಿ ಮಕ್ಕಳ ಸಂಪಾದಕತ್ವದ 'ಪೆನ್ಸಿಲ್' ದ್ವೈ–ಮಾಸ ಪತ್ರಿಕೆಯನ್ನು ಸೋಮವಾರ ಬಿಡುಗಡೆಗೊಳಿಸಿ ಮಾತನಾಡಿದರು. ಶಾಲೆಗಳಲ್ಲಿ ಮಕ್ಕಳಿಗಾಗಿಯೇ ಒಂದು ಪತ್ರಿಕೆ ಪ್ರಕಟಣೆ ಮಾಡುತ್ತಿರುವುದು ಶ್ಲಾಘನೀಯ. ಓದು ಬರಹದ ಹವ್ಯಾಸಗಳು ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಕ ಕೊಟ್ರೇಶ.ಬಿ ಅವರು ಆಸಕ್ತಿಯಿಂದ, ದಾನಿಗಳ ಸಹಾಯದಿಂದ ಪತ್ರಿಕೆ ಪ್ರಕಟಣೆ ಮಾಡುತ್ತಿರುವುದು ಇತರ ಶಿಕ್ಷಕರಿಗೆ ಮಾದರಿಯಾಗಿದೆ ಎಂದರು.


ಪ್ರಾಸ್ತಾವಿಕವಾಗಿ ಮುಖ್ಯಗುರು ನಾಗೇಂದ್ರಪ್ಪ ಮೇವುಂಡಿ ಮಾತನಾಡಿ, ಪೆನ್ಸಿಲ್ ಪತ್ರಿಕೆ ರಾಜ್ಯದ ಸರಕಾರಿ ಶಾಲೆಯಲ್ಲಿ ಒಂದು ವಿಶಿಷ್ಟ ಪ್ರಯೋಗ, ಇಂಗ್ಲೀಷ್ ಹಾಗೂ ಕನ್ನಡದಲ್ಲಿ ದ್ವಿಭಾಷೆಯಲ್ಲಿ ಪ್ರಕಟವಾಗುತ್ತಿರುವ ಸರಕಾರಿ ಶಾಲೆಯ ಏಕೈಕ ಪತ್ರಿಕೆ ಎಂದರು. ಮಕ್ಕಳಿಗೆ ಉಚಿತವಾಗಿ ಈ ಪತ್ರಿಕೆ ಹಂಚಿಕೆಯಾಗುತ್ತಿದ್ದು ಇದರ ಪ್ರಕಟಣೆಯ ವೆಚ್ಚವನ್ನು ದಾನಿಗಳು ಭರಿಸುತ್ತಾರೆ ಎಂದು ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಗದ್ದಿಕೆರೆ ಗ್ರಾಮಪಂಚಾಯ್ತಿ ಸದಸ್ಯ ಬಸಯ್ಯ ಸ್ವಾಮಿ. ಶಿಕ್ಷಕರಾದ ಮಂಜುನಾಥ ಟಿ ಎಸ್ ರವಿಚಂದ್ರನಾಯ್ಕ.ಎಲ್. ಗೀತಾ ಎ. ಗಾಯತ್ರಿ.ಬಿ.ಆರ್ . ರಾಜೇಶ್ವರಿ.ಕೆ. ಕೊಟ್ರೇಶ.ಬಿ ಉಪಸ್ಥಿತರಿದ್ದರು.

# ಆಟೋ ನಿಲ್ದಾಣದ ಜಾಗದಲ್ಲಿ ಶೌಚಾಲಯ ನಿರ್ಮಾಣಕ್ಕೆ ವಿರೋಧ

■ **ಹಂಪಿ ಟೈಮ್ಸ್ ಕೂಡ್ಲಿಗಿ**
ಪಟ್ಟಣದ ಮದಕರಿ ವೃತ್ತದಲ್ಲಿನ ಆಟೋ ನಿಲ್ದಾಣ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡುವುದನ್ನು ವಿರೋಧಿಸಿ ಫೆಡರೇಷನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ ಯೂನಿಯನ್ಸ್ ಪದಾಧಿಕರಿಗಳು ಸೋಮವಾರ ಪಟ್ಟಣ ಪಂಚಾಯ್ತಿ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆಟೋಚಾಲಕರ ಸಂಘದ ಅಧ್ಯಕ್ಷ ಮಂಜು ಮಯೂರ್ ಮಾತನಾಡಿ, ಸದ್ಯ ಪಟ್ಟಣದ ಹೃದಯ ಭಾಗವಾಗಿರುವ ಮದಕರಿ ವೃತ್ತದಲ್ಲಿ ಈಗಾಗಲೇ ಒಂದು ಶೌಚಾಲಯ ವಿದ್ದು, ಇದೀಗ ಆಟೋ ನಿಲ್ದಾಣವಿರುವ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡಲು ಪಟ್ಟಣ ಪಂಚಾಯ್ತಿ ಮುಂದಾಗಿದೆ. ಈಗಿರುವ ಆಟೋ ನಿಲ್ದಾಣದ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡಿದರೆ, ಆಟೋ ನಿಲ್ಲಿಸಲು ಜಾಗವಿಲ್ಲದಂತಾಗುತ್ತದೆ. ಇದನ್ನು ಹೊರತುಪಡಿಸಿ ಮತ್ತೆಲ್ಲಿಯೂ ಆಟೋ ನಿಲ್ಲಿಸಲು ಸ್ಥಳಾವಕಾಶವಿಲ್ಲ. ಇದರಿಂದ ಆಟೋವನ್ನೆ ನಂಬಿ ಜೀವನ ನಡೆಸುತ್ತಿರುವ ಅನೇಕ ಬಡ ಚಾಲಕರ ಜೀವನಕ್ಕೆ ತೊಂದರೆಯಾಗಲಿದೆ. ಆದ್ದರಿಂದ ಆಟೋ ನಿಲ್ದಾಣದ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡಬಾರದು ಎಂದು ಅವರು ಒತ್ತಾಯಿಸಿದರು.



ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕಾವಲ್ಲಿ ಶಿವಪ್ಪ ನಾಯಕ ಹಾಗೂ ಕಿರಿಯ ಎಂಜನಿಯರ್ ಗಿರೀಶ್ ಮನವಿ ಪತ್ರ ಸ್ವೀಕರಿಸಿದರು.

ಈ ವೇಳೆ ಆಟೋ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಕುಮಾರಸ್ವಾಮಿ, ಉಪಾಧ್ಯಕ್ಷರಾದ ಡಿ. ಸೌಡಪ್ಪ, ಬಣಕಾರ ನಾಗರಾಜ, ಅನಂತಕುಮಾರ್, ಕುಮಾರ್, ಗಾಳೆನಾಯ್ಕ, ಟೈಗರ್ ದುರುಗಪ್ಪ, ರಮೇಶ್, ಮಲ್ಲಿಕಾರ್ಜುನ, ಗೋವಿಂದಪ್ಪ, ರಾಘ ವೇಂದ್ರ, ಶಿವು, ಮಂಜುನಾಥ, ಓಬಳೇಶ್, ಅಜೀಜ್, ಬಿ. ರಾಘವೇಂದ್ರ ಮೊದಲಾರದ ಪಟ್ಟಣದ ಆಟೋಚಾಲಕರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 59 ದಿನ
https://epaper.hampitimes.com
ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

ನಿನ್ನ ಏಳಿಗೆ ನೀನೇ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

## ಗದ್ಯ– ಪ್ರ.ಭಾ.–ಕನ್ನಡ : ಅಗ್ನಿಭೂತಿ ವಾಯುಭೂತಿಯರ ಕಥೆ

**ಲೇಖಕರ ಪರಿಚಯ:** ಶಿವ ಕೊಟ್ಯಾಚಾರ್ಯರ ಕಾಲಕ್ರಿ.ಶ. ಸುಮಾರು 10 ನೆಯ ಶತಮಾನ, ವಿಜಯನಗರ ಜಿಲ್ಲೆಯ ಕೋಗಳಿ ನಾಡಿನವನು. ಈತನು ಕನ್ನಡದ ಪ್ರಥಮ ಗದ್ಯ ಕೃತಿ ವಡ್ಡಾರಾಧನೆ ಯ ಕರ್ತೃ. ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ 19 ಕಥೆಗಳಿವೆ. ಇವರಿಗೆ ಕನ್ನಡದ ಮೊದಲ ಗದ್ಯ ಕವಿ ಎಂಬ ಬಿರುದಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಕೌಸಂಬಿಯ ಅರಸ ಯಾರು ?**
ಉತ್ತರ– ಕೌಸಂಬಿಯ ಅರಸ ಅತಿಬಲ.

**2. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು ?**
ಉತ್ತರ– ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ವಾಯುಭೂತಿ.

**3. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?**
ಉತ್ತರ– ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಸೋದರನಾದ ಸೂರ್ಯ ಮಿತ್ರನ ಬಳಿಗೆ ಕಳುಹಿಸಿದಳು.

**4. ಸೂರ್ಯ ಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಹೇಳಲು ಕಾರಣವೇನು ?**
ಉತ್ತರ– ಸಲುಗೆಯಿಂದ ಕೆಡಬಾರದೆಂದು ಸೂರ್ಯ ಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿ ಇಲ್ಲ ಎಂದು ಅಗ್ನಿಭೂತಿ ವಾಯುಭೂತಿಯರಿಗೆ ಹೇಳಿದನು.

**5. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು ?**
ಉತ್ತರ– ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತಪದವಿ ಮಂತ್ರಿ ಪದವಿ.

**ಕೊಟ್ಟಿರುವ ಪ್ರಶ್ನೆಗಳಿಗೆ 3– 4 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖ ರೆಂದು ತೀರ್ಮಾನಿಸಿದ್ದೇಕೆ ?**
ಉತ್ತರ– ಅತಿಬಲ ಮಹಾರಾಜನು ಅಗ್ನಿಭೂತಿ ವಾಯುಭೂತಿ ಯರನ್ನು ರಾಜಸಭೆಗೆ ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುತ್ತಿದ್ದರು. ಸಭೆಯಲ್ಲಿದ್ದ ಎಲ್ಲರೂ ಇವರು ಮೂರ್ಖರು, ಯಾವ ವಿದ್ಯೆಗಳನ್ನು ತಿಳಿದಿಲ್ಲ, ಸಪ್ತ ವ್ಯಸನಗಳಿಗೆ ಒಳಗಾದವರು ಎಂದು ತೀರ್ಮಾನಿಸಿದರು.

**2. ಅಗ್ನಿಭೂತಿ ವಾಯುಭೂತಿಯರು ಸೂರ್ಯ ಮಿತ್ರನಿಂದ ಕಲಿತ ವಿದ್ಯೆಗಳಾವುವು ?**
ಉತ್ತರ– ಅಗ್ನಿಭೂತಿ ವಾಯುಭೂತಿಯರು ಸೂರ್ಯ ಮಿತ್ರನಿಂದ ಹಗಲು ರಾತ್ರಿ ಎನ್ನದೆ ನಿರಂತರವಾಗಿ ಕಟ್ಟುನಿಟ್ಟಿನಿಂದ ಓದಿ, ಏಳೆಂಟು ವರ್ಷದ ಒಳಗೆ ನಾಲ್ಕು ವೇದಗಳು, ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯಗಳನ್ನು, 18 ಧರ್ಮ ಶಾಸ್ತ್ರಗಳನ್ನು, ಮೀಮಾಂಸೆ, ತರ್ಕ, ವ್ಯಾಕರಣ, ಪ್ರಮಾಣ, ಅಲಂಕಾರ, ನಿಘಂಟು, ಕಾವ್ಯ ನಾಟಕಗಳು, ಅರ್ಥಶಾಸ್ತ್ರ, ಸಾಮುದ್ರಿಕ, ಅಶ್ವಶಾಸ್ತ್ರ, ಗಜ ಶಾಸ್ತ್ರ, ಹಾನಿತ ಸುಶ್ರುತನ ವೈದ್ಯಶಾಸ್ತ್ರ, ಚರಕ ಸಂಹಿತ, ಕ್ಷಾರ ಪಾನೀಯ ಮುಂತಾದ ನರವೈದ್ಯ ಶಾಸ್ತ್ರಗಳನ್ನು, ಜ್ಯೋತಿಷ್ಯ ಮಂತ್ರವಾದ ಮೊದಲಾದ ಶಾಸ್ತ್ರಗಳೆಲ್ಲವನ್ನು ಕಲಿತರು.

**3. ಸೂರ್ಯ ಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು ?**
ಉತ್ತರ– ಸೂರ್ಯ ಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ–" ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿ ರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟು ಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ಕೋಪಗೊಳ್ಳದಿರಿ, ನನ್ನನ್ನು ಕ್ಷಮಿಸಿ "ಎಂದು ಹೇಳಿದನು.

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1." ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ"**
ಆಯ್ಕೆ– ಈ ವಾಕ್ಯವನ್ನು ಶಿವ ಕೊಟ್ಯಾಚಾರ್ಯರು ವಿರಚಿತ' ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ ಅಗ್ನಿಭೂತಿ ವಾಯುಭೂತಿಯರ ಕಥೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳ ಲಾಗಿದೆ.
ಸಂದರ್ಭ– ಅತಿಬಲ ಮಹಾರಾಜನು ಸೋಮಶರ್ಮನ ಸಾವಿನ ನಂತರ ಕರೆಸಿ, ಪೂರ್ಣ ಸ್ನಾನ ಮಾಡಿಸಿ, ಬಟ್ಟೆಯುಡಿಸಿ ತಕ್ಕ ಭೂಷಣಗಳನ್ನು ಕೊಡಿಸಿ, ಊಟ ಮಾಡಿಸಿದನು, ತಾಂಬೂಲ ಕೊಟ್ಟು ನೀವು ದುಃಖ ಪಡದಿರಿ ಎಂದು ಸಮಾಧಾನ ಹೇಳಿ ಮನೆಗೆ ಕಳುಹಿಸಿ ಕೊಟ್ಟನು. ಕೆಲ ದಿನಗಳ ನಂತರ ಅವರನ್ನು ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ– ನಾವು ಯಾವ ವಿದ್ಯೆಗಳನ್ನು ತಿಳಿದಿಲ್ಲ ಎಂದು ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿರುವ ಭಾವ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

**2."ಪಸರಂಗೊಟ್ಟೆನಿಲ್ಲಿದರ್ಕೆ ಮುಳಿಯದಿರಿಂ"**
ಆಯ್ಕೆ– ಈ ವಾಕ್ಯವನ್ನು ಶಿವ ಕೋಟ್ಯಾಚಾರ್ಯರು ವಿರಚಿತ' ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ' ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ– ಅಗ್ನಿಭೂತಿ ವಾಯುಭೂತಿಯರು ಸೂರ್ಯ ಮಿತ್ರನಿಗೆ ನಿಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದೆವು. ಇನ್ನು ನಾವು ನಮ್ಮ ನಾಡಿಗೆ ತೆರಳುವುವು ಎಂದು ಉಪಾಧ್ಯಾಯರಿಗೆ ವಂದಿಸಿ, ನಮಸ್ಕರಿಸಿ ಹೊರಟಾಗ ಸೂರ್ಯ ಮಿತ್ರನು ಹೀಗೆಂದನು–" ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟು ಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ– ಸೊಕ್ಕು ತಲೆಗೇರಿದರೆ ಯಾವ ವಿದ್ಯೆಗಳನ್ನು ಕಲಿಯಲು ಸಾಧ್ಯವಿಲ್ಲ ಎಂಬ ತಂತ್ರ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

**3." ಪಂಡಿತ ಜನ ಮೆಲ್ಲಂ ಮೆಚ್ಚಿ ಬಿಚ್ಚಳಿಸಿ "**
ಆಯ್ಕೆ– ಈ ವಾಕ್ಯವನ್ನು ಶಿವ ಕೊಟ್ಯಾಚಾರ್ಯರು ವಿರಚಿತ' ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ' ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ– ಪಂಡಿತರಾದ ಅಗ್ನಿಭೂತಿ ವಾಯುಭೂತಿಯರು ಕೌಶಂಬಿ ತಲುಪಿ, ತಮ್ಮ ಮನೆಗೆ ಹೊಕ್ಕು ತಾಯಿಯನ್ನು ಕಂಡು ವಂದಿಸಿದರು. ತಾವು ವಿದ್ವಾಂಸರಾಗಿ ಬಂದುದ್ದನ್ನು ತಿಳಿಸಿದರು. ಸ್ನಾನ ಊಟ ಮಾಡಿ ವಿಶ್ರಾಂತಿ ಪಡೆದರು. ಒಳ್ಳೆಯ ದಿನ ವಾರ ನಕ್ಷತ್ರದಲ್ಲಿ ಇಬ್ಬರು ಅತಿಬಲ ಮಹಾರಾಜನಲ್ಲಿಗೆ ಬಂದು ಬೇರೆ ಬೇರೆಯಾಗಿ ಸ್ತುತಿ ರಚನೆ ಮಾಡಿದರು. ಕ್ರಿಯಾ ಕಾರಕ ಸಂಬಂಧದಿಂದ ವ್ಯಾಖ್ಯಾನಿಸಿ, ತಮ್ಮ ಪಾಂಡಿತ್ಯವನ್ನು ಪ್ರಕಟಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ– ವಿದ್ಯೆಯಿಂದ ಪದವಿ, ಗೌರವ ಎಲ್ಲವೂ ದೊರೆಯುವುವು ಎಂಬುದು ಮೇಲಿನ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ






# ಇರುವುದರಲ್ಲೇ ಬದುಕು ಸಂಭ್ರಮಿಸು


## ವಿಶ್ರಾಂತ ಉಪನ್ಯಾಸಕ ಡಾ. ಎಸ್.ಶಿವಾನಂದ ಹೇಳಿಕೆ | ಸಮಾಜಕ್ಕೆ ಶಿಕ್ಷಣ, ಅರಿವು ಅಗತ್ಯವಿದೆ | ಸ್ಥೈರ್ಯ ಪರಿಕಲ್ಪನೆ ಉತ್ತಮ ಎಲ್ಲವನ್ನೂ ಉಚಿತವಾಗಿ ಕೊಟ್ಟ ಪರಿಸರಕ್ಕೆ ನಮ್ಮ ಕೊಡುಗೆಯೂ ಇರಲಿ | ಸ್ನೇಹ ಸಮ್ಮಿಲನಗಳು ಕುಟುಂಬ ಸಮ್ಮಿಲನಗಳಾಗಲಿ



**ಹಂಪಿ ಟೈಮ್ಸ್ ಹೊಸಪೇಟೆ**

ಮನುಷ್ಯ ಬದುಕಿರೋದೆ ಸಂಭ್ರಮಿಸುವುದಕ್ಕೆ. ಇರುವುದರಲ್ಲೆ ಇದ್ದುದ್ದನ್ನು ಅನುಭವಿಸಿದಾಗ ಸಿಗುವ ಆನಂದ, ನೆಮ್ಮದಿ ಕಷ್ಟಪಟ್ಟು ಉಳಿಸಿದ ಯಾವ ಉಳಿತಾಯವು ನೀಡಲಾರದು ಎಂದು ವಿಜಯನಗರ ಕಾಲೇಜಿನ ವಿಶ್ರಾಂತ ಉಪನ್ಯಾಸಕರಾದ ಡಾ.ಎಸ್.ಶಿವಾನಂದ ಹೇಳಿದರು.

ನಗರದ ಮಲ್ಲಿಗೆ ಹೋಟೆಲ್ ಸಭಾಂಗಣಲ್ಲಿ ಜ.19 ಭಾನುವಾರ ವಿಜಯನಗರ ಮಹಾವಿದ್ಯಾಲಯದ 1996ರ ಬಿಎ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಗುರುವಂದನೆ ಸಮಾರಂಭ ಹಾಗೂ ಸ್ನೇಹಿತರ ಪುನರ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 29 ವರ್ಷಗಳ ನಂತರ ವಿದ್ಯಾರ್ಥಿಗಳನ್ನು ಮತ್ತೆ ಒಂದೆಡೆ ನೋಡುತ್ತಿರುವುದು ಬಹಳ ಸಂತಸವಾಗಿದೆ. ನಿಮ್ಮೆಲ್ಲರ ಮುಖದಲ್ಲಿರುವ ಹರ್ಷ ನೋಡಿ ಆನಂದಿಸಿ ಅನುಭವಿಸುತ್ತಿದ್ದೇನೆ ವರ್ಣಿಸಲು ಶಬ್ದಗಳು ಸಾಲದು ಎಂದ ಅವರು, ಕಲಾ ವಿಭಾಗ ಆಯ್ಕೆ ಮಾಡಿಕೊಂಡವರು ಬದುಕು ಕಟ್ಟಿಕೊಳ್ಳಬಹುದು ಎಂಬುದುನ್ನು ವಿದ್ಯಾರ್ಥಿಗಳು ನಿರೂಪಿಸಿದ್ದೀರಿ. ಅನೇಕ ವಿದ್ಯಾರ್ಥಿಗಳು ಶಿಕ್ಷಕರು, ಉಪನ್ಯಾಸಕರು, ವಕೀಲರು, ಲೇಖಕರು, ಇನ್ನೂ ಕೆಲವರು ಕೃಷಿಯಲ್ಲಿ ತೊಡಗಿಸಿಕೊಂಡು ಅನ್ನದಾತರಾಗಿದ್ದಾರೆ. ಅಲ್ಲದೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಉದ್ಯಮಿಗಳಾಗಿದ್ದಾರೆ. ರಾಜಕಾರಣಿಗಳಾಗಿದ್ದಾರೆ ಮತ್ತು ಮಾಧ್ಯಮ ಕ್ಷೇತ್ರದಲ್ಲಿದ್ದುಕೊಂಡು ಸಮಾಜದ ಅಂಕುಡೊಂಕು ತಿದ್ದುವ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಂಡಿರುವುದು ಕಂಡು ಮೈ ರೋಮಾಂಚನ ಗೊಂಡಿದೆ. ಸ್ನೇಹ ಸಮ್ಮಿಲನಗಳು ಕುಟುಂಬ ಸಮ್ಮಿಲನ ಗಳಾದಾಗ ಗಂಡ–ಹೆಂಡತಿ ಮಕ್ಕಳಿಗೂ ಸಂತೋಷದಲ್ಲಿ ಭಾಗಿಯಾಗುವ ಅವಕಾಶ ದೊರೆತು ಇದನ್ನು ಮುಂದುವರೆಸಲು ಸಹಕಾರಿ ಯಾಗಲಿದೆ ಎಂದರು.




ಪಂಚಭೂತಗಳು ನಮ್ಮ ಜೀವನದ ಉತ್ಕೃಷ್ಟತೆಗಾಗಿ ಇವೆ. ಏನನ್ನೂ ನಿರೀಕ್ಷಿಸದೆ ಎಲ್ಲವನ್ನು ಕೊಟ್ಟ ಪ್ರಕೃತಿಗೆ ನಾವೇನು ಕೊಟ್ಟಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಮಾಜಕ್ಕೆ ಶಿಕ್ಷಣ ಮತ್ತು ಸಂಸ್ಕಾರದ ಅಗತ್ಯವಿದೆ. ಪರಿಸರ ಉಳಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು. ಸ್ವಯಂಪ್ರೇರಿತವಾಗಿ ಪರಿಸರ ಸಂರಕ್ಷಣೆಗೆ ತೊಡಗಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯೂ ಹೌದು. ದಯವೇ ಧರ್ಮದ ಮೂಲ ಎಂಬುದನ್ನು ಅರಿತು ನಡೆಯಬೇಕು. 1996ರ ಬ್ಯಾಚ್‌ನ ವಿದ್ಯಾರ್ಥಿಗಳು 'ಸ್ಥೈರ್ಯ ನಮಗಾಗಿ' ಎಂಬುದನ್ನು ಹುಟ್ಟುಹಾಕಿ, ನಮ್ಮವರ ಸಂಕಷ್ಟಗಳಿಗೆ ಸ್ಪಂದಿಸಲು ಯೋಜನೆಯೊಂದನ್ನು ರೂಪಿಸಿರುವುದು ಶ್ಲಾಘನೀಯ ಕಾರ್ಯ. ಹಳೇ ವಿದ್ಯಾರ್ಥಿಗಳಿಂದ ಸಮಾಜಕ್ಕೆ ದಾಸೋಹ ಕಾರ್ಯ ಮುಂದುವರೆಯಲಿ. ಪ್ರತಿಯೊಬ್ಬರನ್ನೂ ಗೌರವಿಸುವ ಮನೋಭಾವ ಎಲ್ಲರಲ್ಲಿ ಬೆಳೆಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗುರುಗಳನ್ನು ಸನ್ಮಾನಿಸಿ ಗೌರವಿಸಿ ಆಶೀರ್ವಾದ ಪಡೆದರು. ವಿದ್ಯಾರ್ಥಿಗಳು ಗುಂತಕಲ್, ಬೆಂಗಳೂರು, ಉಜಿರೆ, ಬಳ್ಳಾರಿ, ಕಂಪ್ಲಿ, ವಿಜಯನಗರ ಜಿಲ್ಲೆ ಸೇರಿದಂತೆ ನಾಡಿನ ವಿವಿಧೆಡಗಳಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಹಳೇ ವಿದ್ಯಾರ್ಥಿಗಳು ಗುರುಗಳೊಂದಿಗೆ ಫೋಟೊ ತೆಗೆಸಿಕೊಂಡು ಪುಳಕಗೊಂಡರು. ಕವನ ವಾಚನ, ಶಾಯಿರಿ, ಕನ್ನಡದ ಗೀತೆಗಳ ಹಾಡಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು. ಡಿಜಿಟಲ್ ಪರದೆ ಮೇಲೆ ಆದಿನಗಳ ಚಿತ್ರಗಳನ್ನು ನೋಡಿ ಭಾವಪರವಶವಾದರು.

ರಾಜಶೇಖರ, ಮಹ್ಮದ್ ಯಾಕೂಬ್, ಎಲ್.ಎಸ್.ಆನಂದ, ಕರಿಬಸಯ್ಯ ಹಿರೇಮಠ, ಸುರೇಶ, ಪ್ರಕಾಶ್‌ಗೌಡ, ಕುರಿಶಿವಮೂರ್ತಿ, ಭಾರತಿ ನೇತೃತ್ವದ ತಂಡ ಆಯೋಜಿಸಿದ್ದ ಈ ಸಮಾರಂಭಕ್ಕೆ ಮಿತ್ರರು ಮೆಚ್ಚುಗೆ ವ್ಯಕ್ತಪಡಿಸಿ ಶ್ಲಾಘಿಸಿದರು. ಶಾರದ ಎಂ.ಎಸ್. ಪ್ರಾರ್ಥಿಸಿದರು. ವೆಂಕಟೇಶ ಬಡಿಗೇರ ಸ್ವಾಗತಿಸಿದರು. ಪರಶುರಾಮ ಮಾಳಿಗಿ ಪ್ರಾಸ್ತಾವಿಕ ಮಾತನಾಡಿದರು. ಸುನಿತಾ ಮತ್ತು ಪ್ರಸಾದ ನಿರ್ವಹಿಸಿದರು.



ಮಲ್ಲಿಗೆ ಹೋಟೆಲ್‌ನಲ್ಲಿ ನಡೆದ ನಮ್ಮ 1996 ಬಿಎ ಬ್ಯಾಚ್‌ನ ಸ್ನೇಹಿತರ ಪುನರ್ಮಿಲನ ಹಾಗು ಗುರು ವಂದನೆ ಸಮಾರಂಭ ನಮ್ಮೆಲ್ಲರ ಸಮ್ಮಿಲನ ಹಾಗೆಯೇ ನಮ್ಮನ್ನು 1996ಕ್ಕೆ ಕೊಂಡು ಹೋದ ಕ್ಷಣವಾಗಿತ್ತು. ಇನ್ನೊಮ್ಮೆ ಮತ್ತೊಮ್ಮೆ ನಮ್ಮ ಕಾಲೇಜಿನ ದಿನಗಳನ್ನು ಮೆಲುಕು ಹಾಕಿದ ಕ್ಷಣ ಹಾಗೂ ಸ್ಥೈರ್ಯ ನಮಗಾಗಿ ಎನ್ನುವ ಯೋಜನೆ ಈ ಸಂದರ್ಭದಲ್ಲಿ ಜಾರಿಗೆ ತಂದಿದ್ದು ನಮ್ಮವರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಿದೆ. ಇದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲಿ

– ಎ.ಆರ್.ಪದ್ಮ, ಬೆಂಗಳೂರು.



ಸ್ನೇಹಿರತರನ್ನು ಒಟ್ಟುಗೂಡಿಸಿ ನೋಡುವ ಸಂಭ್ರಮವೇ ಅತ್ಯುದ್ಭುತ. ಎಲ್ಲಾ ಸ್ನೇಹಿತರು ಸ್ಪಂದಿಸಿದ್ದು ಅಚ್ಚುಕಟ್ಟಾಗಿ ಅಯೋಜಿಸಲು ಸಹಕಾರಿಯಾಯಿತು. ಜೀವನದಲ್ಲಿ ಸ್ನೇಹಿತರ ಸಂಬಂಧಗಳು ಎಲ್ಲಾ ಸಂಬಂಧಿಗಳಿಗಿಂತ ಮಿಗಿಲಾದದ್ದು. ಗುರುಗಳ ಸ್ಮರಣೆ, ಗೌರವಿಸುವ ಹೊಣೆ ಪ್ರತಿಯೊಬ್ಬ ವಿದ್ಯಾರ್ಥಿಗಳದ್ದಾಗಿದೆ. ಅಂತಹ ಅವಕಾಶವನ್ನು ಮರಕಳಿಸಿಕೊಟ್ಟ ಎಲ್ಲಾ ಸ್ನೇಹಿತರಿಗೆ ಧನ್ಯವಾದಗಳು. ಎಲ್ಲರ ಸಹಕಾರದೊಂದಿಗೆ ಸ್ಥೈರ್ಯ ನಮ್ಮವರಿಗಾಗಿ ಸದಾ ಸ್ಪಂದಿಸಲಿದೆ.

– ಕೆ.ರಾಜಶೇಖರ, ಹೊಸಪೇಟೆ



ಗುರುವಂದನೆ–ಸ್ನೇಹ ಪುನರ್ಮಿಲನವು ಅಂದಿನ ಮಧುರಕ್ಷಣಗಳನೆನಪುಗಳನ್ನುಪುನರ್ಜೀವಿತಗೊಳಿಸಿತು. ಸಂಬಂಧಗಳ ಪುನಸ್ಥಾಪನೆಗೆ ಮತ್ತು ಸಂಪರ್ಕವನ್ನು ಬಲಪಡಿಸುವ ಕಾರ್ಯಕ್ರಮ. ಸ್ನೇಹಿತರಲ್ಲಿ ಹೊಸ ಉತ್ಸಾಹ ತುಂಬಿದೆ. ಸಹಾಯ ಮತ್ತು ಪ್ರೋತ್ಸಾಹಕ್ಕಾಗಿ ಸ್ಥೈರ್ಯ ಸ್ಥಾಪನೆಗೆ ಅವಕಾಶವಾಯಿತು. ನಿತ್ಯದ ಕೆಲಸಗಳು, ಮಾನಸಿಕ ಒತ್ತಡಗಳಿಂದ ಹೊರಬತಲು ಸ್ನೇಹಿತರ ಸಮ್ಮಿಲನಗಳು ಮಾನಸಿಕ ಆರಾಮ ನೀಡುತ್ತವೆ. ಎರಡು ವರ್ಷಕ್ಕೊಮ್ಮೆಯಾದರೂ ಸ್ನೇಹ ಪುನರ್ಮಿಲನಗಳು ನಡೆಯುತ್ತಿರಲಿ.

– ಬಸಾಪುರ ಬಸವರಾಜ, ಹೊಸಪೇಟೆ



ಗುರುವಂದನೆ ಮತ್ತು ಸ್ನೇಹಿತರ ಪುನರ್ಮಿಲನ ಕಾರ್ಯಕ್ರಮ ಅದ್ಭುತವಾಗಿತ್ತು. ಗುರುಗಳ ಹಿತನುಡಿಗಳು ಹೃದಯ ಸ್ಪರ್ಶಿಯಾಗಿದ್ದವು. ಸ್ಥೈರ್ಯ ನಮಗಾಗಿ ಅನ್ನುವುದು ಒಂದು ಅದ್ಭತವಾದ ಆಲೋಚನೆ. ಹಳೆಯ ನೆನಪುಗಳನ್ನು ತಿರುವು ಹಾಕಿದ ಫೋಟೋ ಸ್ಲೈಡ್ಸ್, ಸ್ನೇಹಿತರ ಪರಸ್ಪರ ಸಂಭಾಷಣೆ, ಪುಸ್ತಕ ಆವಿಷ್ಕರಣೆ, ಮನೋರಂಜನಾ ಕಾರ್ಯಕ್ರಮಗಳು ಎಲ್ಲವೂ ಆನಂದ ದಾಯಕ ವಾಗಿದ್ದವು. ಎಲ್ಲ ಕ್ಷಣಗಳು ಅವಿಸ್ಮರಣೀಯ.

– ಶಾರದ ಎಂ.ಎಸ್., ಗುಂತಕಲ್



ಗುರುವಂದನೆ ಮತ್ತು ಸ್ನೇಹಿತರ ಪುನರ್ಮಿಲನದಲ್ಲಿ ಗುರುಗಳಾದ ಡಾ.ಶಿವಾನಂದ ಅವರ ಮಾತುಗಳನ್ನು ಕೇಳುವ ಸೌಭಾಗ್ಯ ನನ್ನದಾಯಿತು. ಹಳೇ ನೆನಪುಗಳನ್ನು ಮರುಕಳಿಸಿದವು. ಈ ದಿನ ಅವಿಸ್ಮರಣೀಯ. ಸ್ಥೈರ್ಯ ನಮಗಾಗಿ ಪರಿಕಲ್ಪನೆ ಹರ್ಷತಂದಿದೆ. ಸ್ನೇಹಿತರು ಶಾಯಿರಿ ಹೇಳಿ ಅಂದಿನ ನಮ್ಮ ಗುರುಗಳಾದ ಇಟಿಗಿ ಈರಣ್ಣ ಮತ್ತು ಬಸವರಾಜ್ ಮಲಶೆಟ್ಟಿ ಅವರನ್ನು ಮತ್ತೊಮ್ಮೆ ಕಣ್ಮುಂದೆ ತರಿಸಿದ ಕ್ಷಣವಾಗಿತ್ತು. ಎಲ್ಲರನ್ನೂ ಒಟ್ಟಗೂಡಿಸಲು ಅಚ್ಚುಕಟ್ಟಾಗಿ ಆಯೋಜನೆ ಮಾಡಿದ ಮಿತ್ರರ ಕಾರ್ಯ ಸಾರ್ಥಕವೆನಿಸಿತು.

– ರಾಜೇಶ್ವರಿ.ಪಿ.ಎಸ್. ಹೊಸಪೇಟೆ



ಗುರುಗಳು ಮತ್ತು ಸ್ನೇಹಿತರ ಜೊತೆಗಿನ ಸಂಬಂಧಗಳ ಪುನಸ್ಥಾಪನೆಗೆ ಇಂತಹ ಕಾರ್ಯಕ್ರಮಗಳು ಸಹಕಾರಿ. ದೀರ್ಘಕಾಲದಿಂದ ಸಂಪರ್ಕ ಕಳೆದುಕೊಂಡ ಸ್ನೇಹಿತರನ್ನು ಮತ್ತೆ ಭೇಟಿಯಾಗಿ ಸಂಬಂಧವನ್ನು ಪುನರ್ ಬಲಪಡಿಸಿದೆ. ನಮ್ಮವರ ಬಲವರ್ಧನೆಗಾಗಿ ಸ್ಥೈರ್ಯ ನಮಗಾಗಿ ಆರಂಭಿಸಿದ್ದೇವೆ. ಸ್ನೇಹಿತರೊಂದಿಗೆ ಬೆರೆತು ಸಂಭ್ರಮಿಸಿದಾಗ ಸಿಗುವ ಆನಂದ ಮತ್ತಾವುದೇ ಕ್ಷಣಗಳಲ್ಲೂ ಸಿಗಲಾರದು. ಸ್ನೇಹಿತರ ಪುನರ್ಮಿಲನಗಳು ಬದುಕಿನ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ.

– ಎಲ್.ಎಸ್.ಆನಂದ, ಹೊಸಪೇಟೆ



ಸುಮಾರು 29 ವರ್ಷಗಳ ಹಳೆಯ ಸ್ನೇಹಿತರನ್ನು ಒಟ್ಟುಗೂಡಿಸುವಲ್ಲಿ ಪದ್ಮ, ಮಹ್ಮದ್ ಯಾಕೂಬ್, ರಾಜಶೇಖರ್, ಭಾರತಿ ನೇತೃತ್ವದ ತಂಡ ಮಾಡಿರುವ ಕಾರ್ಯ ಶ್ಲಾಘನೀಯ. ಹಣವಿದ್ದಮಾತ್ರಕ್ಕೆ ಆನಂದ ದೊರೆಯದು, ಗತಕಾಲದ ಆನಂದ ಕಾಣಲು ಸ್ನೇಹಿತರಿಂದ ಮಾತ್ರ ಸಾಧ್ಯ ಎಂಬುದನ್ನು ಮತ್ತೊಮೆ ಸಾಬೀತು ಪಡಿಸಿದ ತಂಡಕ್ಕೆ ಧನ್ಯವಾದಗಳು, ಎಲ್ಲರೊಂದಿಗೆ ಮುಂದಿನ ಸಾಹಸಕ್ಕಾಗಿ ಎದುರು ನೋಡುವೆ.

– ಆದೋನಿ ಮೂಡಲಪ್ಪ, ಕಂಪ್ಲಿ.



ಆ ದಿನಗಳನ್ನು ನೆನಪಿಸಿದ ಸ್ನೇಹಲೋಕ, 1996 ರ ಬಿಎ ಪದವಿ ಸ್ನೇಹಿತರ ಪುನರ್ಮಿಲನದಿಂದ. ಒಳ್ಳೆಯ ಸಮಯವನ್ನು ಸವಿದಿದ್ದೇವೆ. ನಾವು ಪುನಃ ಪದವಿ ತರಗತಿಯಲ್ಲಿ ಕಳೆದ ಕ್ಷಣಗಳನ್ನು ನೆನಪಿಸಿಕೊಳ್ಳುವಂತಾಯಿತು.

ಆ ದಿನಗಳಲ್ಲಿ ತಮಾಷೆ, ಹಾಸ್ಯ, ಹಾಡು ಹರಟೆ ಮಾಡುತ್ತಾ ಇರುವಂತೆ ಆ ದಿನಗಳನ್ನು ನೆನಪಿಸಿತು. ಹಾಗೂ ಆನಂದಿಸುವಂತಾಯಿತು. ಈ ಕ್ಷಣ ಗಳಿಗೆ ಕಾರಣೀಭೂತರಾದ ಸ್ನೇಹಿತರಿಗೆ ಹೃತ್ಪೂರ್ವಕ ಅಭಿನಂದನೆಗಳು

– ಚರಿತ.ಬಿ ಹೊಸಪೇಟೆ.



ನಮ್ಮ ಮನ ಮನಗಳಲ್ಲಿ ಉಲ್ಲಾಸದ ನಗುವನ್ನು ಸದಾ ಹಸಿರಾಗಿರುವಂತೆ ಸಂತೋಷ ಹೊತ್ತಿಸಿದ VNC 96 ಸ್ನೇಹಿತರ ಪುನರ್ಮಿಲನ ಮಧುರ ಕಾರ್ಯಕ್ರಮ ತುಂಬಾ ಅದ್ಭುತವಾಗಿತ್ತು.

ಈ ಹಬ್ಬ ಅನುಭವಿಸಿದವರಿಗೆ ಮಾತ್ರ ಗೊತ್ತು ಅದರ ಗತ್ತು... ಸ್ನೇಹಿತರ ಸಮ್ಮಿಲನಗಳಲ್ಲಿ ಭಾಗವಹಿಸುವುದೇ ನಮ್ಮ ಭಾಗ್ಯ. ಭೌತಿಕವಾಗಿ ದೂರದ ಪ್ರದೇಶದಲ್ಲಿದ್ದ ಗೆಳೆಯರನ್ನು ನೋಡಿದಾಗ ನನ್ನ ಕಣ್ಮನ ತುಂಬಿದವು.

– ಮಹ್ಮದ್ ಯಾಕೂಬ್, ಹೊಸಪೇಟೆ



ಗುರುಗಳಿಗೆ ಗೌರವ ಸಲ್ಲಿಸುವ ಸಂಭ್ರಮ ಹಾಗೂ ಹಳೇ ಸ್ನೇಹಿತರೊಂದಿಗೆ ಬೆರೆಯಲು ಇದೊಂದು ಸುವರ್ಣಾವಕಾಶ. ಗೆಳೆಯರು ನಾನಾ ಕ್ಷೇತ್ರದಲ್ಲಿ ನಿರೀಕ್ಷಿತ ಗುರಿ ತಲುಪಿರುವುದನ್ನು ನೋಡಿ ಸಂತಸವಾಯಿತು. ಸ್ನೇಹಿತರು ಕೈಗೊಳ್ಳುವ ಸಮಾಜಮುಖಿ ಕಾರ್ಯಗಳ ಜೊತೆ ಸದಾ ಇರುವೆ . ನಮಗೆ ಜೀವನದ ಪಾಠಗಳನ್ನು ಕಲಿಸಿದ ಗುರುಗಳನ್ನು ವಂದಿಸುವ ಅವಕಾಶ ದೊರೆತಿದ್ದು ನಮ್ಮ ಸೌಭಾಗ್ಯ.

– ಕುರಿ ಶಿವಮೂರ್ತಿ, ಹೊಸಪೇಟೆ



ಗುರುವಂದನೆ, ಸ್ನೇಹಿತರ ಪುನರ್ಮಿಲನ ಕಾರ್ಯಕ್ರಮ ಆಯೋಜಿಸುವುದರಿಂದ ಸ್ನೇಹಿತರನ್ನು ಮತ್ತೊಮ್ಮೆ ನೋಡುವ ಸೌಭಾಗ್ಯ ನನ್ನದಾಯಿತು. ಗುರುಗಳ ಪಾಠ, ಉಪದೇಶಗಳನ್ನು ಮತ್ತೊಮ್ಮೆಕೇಳಿ ಆನಂದಿಸಿದೆ. ಗುರುಗಳ ಆಶೀರ್ವಾದ ಪಡೆಯಲು ಇಂತಹ ಕಾರ್ಯಕ್ರಮಗಳು ಮತ್ತೆ ಮತ್ತೆ ನಡೆಯುತ್ತಿರಲಿ. ವಿಜಯನಗರ ಜಿಲ್ಲಾ ಕೇಂದ್ರದಲ್ಲೇ ಕಾರ್ಯಕ್ರಮ ಆಯೋಜಿಸಿದ್ದು ಸ್ನೇಹಿತರಿಗೆ ದೂರದ ಪ್ರದೇಶಗಳಿಂದ ಬಂದು ಹೋಗಲು ಅನುಕೂಲವಾಯಿತು.

– ಜೆ ಆಂಜನೇಯ, ಬಳ್ಳಾರಿ



ಸ್ನೇಹಿತರೊಂದಿಗೆ ಸಮಯ ಕಳೆಯುವ ಮೂಲಕ ದಿನನಿತ್ಯದ ಒತ್ತಡದಿಂದ ಮುಕ್ತಿಗೊಳ್ಳಬಹುದು. ಸ್ನೇಹಿತರ ಹಾಸ್ಯ, ಕುಣಿತ, ಹಾಡು ಆನಂದ ನೀಡಿದರು. ಇತ್ತೀಚಿನ ಸಾಧನೆಗಳನ್ನು ಹಂಚಿಕೊಳ್ಳಲು ಮತ್ತು ಇತರರ ಪ್ರಗತಿಯನ್ನು ನೋಡಿ ಸ್ಫೂರ್ತಿಯನ್ನು ಪಡೆಯಲು ಇದು ಉತ್ತಮ ವೇದಿಕೆಯಾಯಿತು. ಮತ್ತಷ್ಟು ಸ್ನೇಹಿತರ ಪರಿಚಯದಿಂದ ಅವರವರ ಕ್ಷೇತ್ರಗಳ ಪರಿಚಯವಾಯಿತು. ಸ್ಥೈರ್ಯ ನಮಗಾಗಿ ಸದಾ ನಮ್ಮವರಿಗಾಗಿ ಪರಿಕಲ್ಪನೆ ಭವಿಷ್ಯದ ದಿನಗಳಲ್ಲಿ ಸ್ನೇಹಿತರಿಗೆ ವರದಾನವಾಗಲಿ

– ಕೊಟ್ರೇಶ್ ಮಾಳಿಗಿ, ಹ.ಬೊ.ಹಳ್ಳಿ



ಸುಂದರ ಬದುಕು ಕಟ್ಟಿಕೊಳ್ಳುವ ಹಾಗೂ ಜೀವನದಲ್ಲಿ ಸದಾ ಸಂತಸವಾಗಿರಲು ತಿಳಿಸಿದ ಡಾ. ಶಿವಾನಂದ ಅವರ ನುಡಿಮುತ್ತುಗಳು ನಮ್ಮನ್ನು ಚಿಂತನಶೀಲರನ್ನಾಗಿಸಿವೆ. ಹಳೆಯ ಎಲ್ಲಾ ಸ್ನೇಹಿತರು ಸೇರಿ ಕುಣಿದು ಕುಪ್ಪಳಿಸಿ ಚಿಕ್ಕ ಮಕ್ಕಳಂತೆ ನೃತ್ಯ ಮಾಡಿ, ಪರಸ್ಪರ ಭಾವನೆಗಳನ್ನು ಹಂಚಿಕೊಂಡ ಸಂಭ್ರಮ ಪದಗಳಲ್ಲಿ ಹೇಳಲು ಸಾಧ್ಯವಿಲ್ಲ. ನಾವು ವಿದ್ಯಾರ್ಥಿಗಳಾದೆವು ಇಂತಹ ಕ್ಷಣಗಳು ಮತ್ತೊಮ್ಮೆ ಮಗದೊಮ್ಮೆ ಬರುತ್ತಿರಲಿ. ಮನಸ್ಸಿನ ದುಗುಡಗಳನ್ನು ಹಗುರಗೊಳಿಸಿದೆ.

– ವೆಂಕಟೇಶ್ ಬಡಿಗೇರ್, ಕಮಲಾಪುರ



1995–96 ನೇ ಸಾಲಿನ ಬಿ.ಎ. ಬ್ಯಾಚ್‌ನಿಂದ ಜರುಗಿದ ಗುರುವಂದನೆ ಹಾಗೂ ಸ್ನೇಹಿತರ ಸಮ್ಮಿಲನ ಕಾರ್ಯಕ್ರಮ ಅತ್ಯಂತ ಅದ್ಭುತವಾಗಿ ಮೂಡಿ ಬಂದಿತು. ಆಯೋಜನೆಗೆ ಹಲವರ ಪರಿಶ್ರಮ ಸಾರ್ಥಕಗೊಂಡಿದೆ. ಎಲ್ಲರೊಂದಿಗೆ ಬೆರೆತು ನಕ್ಕು ಸಂಭ್ರಮಿಸಿದ ಸುಂದರ ಹಾಗೂ ಅಪರೂಪದ ಕ್ಷಣವಾಗಿತ್ತು. ಎಲ್ಲರೂ ಖುಷಿ ಖುಷಿಯಿಂದ ಪಾಲ್ಗೊಂಡ ಅನುಭಗಳನ್ನು ಹಂಚಿಕೊಂಡ ಕ್ಷಣಗಳು ಬೇರೆಲ್ಲೂ ಸಿಗಲಾರವು. ಸ್ನೇಹಿತರ ಸಂಘಟನೆಗೊಂದು ಶಕ್ತಿಯಿದೆ,

– ಜಗದೀಶ್ ಕುಮಾರ್ ಉಂತಕಲ್ಲು ಮಠ್. ಹೋಸಪೇಟೆ.



ಬಿ ಎ 1996 ಸ್ನೇಹಿತರ ಪುನರಮಿಲನ ಕಾರ್ಯಕ್ರಮ ಒಂದು ಅವಿಸ್ಮರಣೀಯ. ನಮ್ಮ ಎಲ್ಲಾ ಸ್ನೇಹಿತರ ಮುಖತಃ ಭೇಟಿಯಾಗಿ ಅವರ ವಿಚಾರ ವಿನಿಮಯ ಮಾಡುತ ಎಲ್ಲಾ ಅವರವರ ವೃತ್ತಿಯ ಅನುಭವ ಅಂಚಿಕೊಳುತಾ ಹಾಗೂ ಗುರುಗಳಾದ ಶ್ರೀ ಶಿವಾನಂದ ಸರ್ ಅವರಿಗೆ ಸನ್ಮಾನ ಅವರ ನುಡಿಗಳು ಕೇಳಿ ತುಂಬಾ ಸಂತೋಷವಾಯಿತು, ಗುರುಗಳ ಮಾತುಕೇಳಿ ಅವರ ತರಗತಿಯಲ್ಲಿ ಕೂತಿರುವ ಅನುಭವವಾಯಿತು. ಸ್ನೇಹಿತರ ಜೊತೆ ಬೆರತು ಕಳೆದ ಸಮಯ ಜೀವನದಲ್ಲಿ ಮರೆಯಲಾರದ ಮಧುರ ಕ್ಷಣಗಳಾಗಿವೆ.

– ಕೆ.ಲೋಕೇಶ್, ಬಸವನದುರ್ಗ, ಹೊಸಪೇಟೆ



ವಿಜಯನಗರ ಕಾಲೇಜಿನ 1996 ರ ಬ್ಯಾಚ್ ನ ಗುರುವಂದನ ಹಾಗೂ ಸ್ನೇಹಿತರ ಪುನರ್ಮಿಲನ ಕಾರ್ಯಕ್ರಮ ಕಾಲೇಜು ದಿನಗಳಲ್ಲಿ ನೆಡೆದ ಘಟನೆಗಳ ನೆನಪು ಬುತ್ತಿಯನ್ನು ಅನಾವರಣ ಗೊಳಿಸಿತ್ತು. ಹಳೇಯ ಸ್ನೇಹಿತರು ನಮ್ಮ ಸುತ್ತಮುತ್ತಲಲ್ಲೆ ಇದ್ದರೂ ಸಹ ಅಪರಿಚತರಂತೆ ಇದ್ದೆವು. ಸ್ನೇಹ ಬಳಗ ದೊಡ್ಡದು ನೆನಪಿನಲ್ಲಿರದ ಕೆಲವು ಸ್ನೇಹಿತರನ್ನು ಮತ್ತೊಮ್ಮೆ ಈ ವೇದಿಕೆಯಲ್ಲಿ ಸೇರುವ ಅಪೂರ್ವ ಅವಕಾಶ ಒದಗಿಸಿತ್ತು ನನ್ನ ಜೀವನದಲ್ಲಿ ಮತ್ತೊಮ್ಮೆ ಸ್ನೇಹಿತರ ಅಪೂರ್ವ ಸಂಗಮ ಕಂಡೆನು.

– ಕೆ. ಎಲ್.ಮೂರ್ತಿ. ಹೊಸಪೇಟೆ